

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 26 Sunday 29-09-2024 E-mail : maruti.b.hosamani76@gmail.com Page: 4 Price : Rs. 1/-


# ಅಧಿಕಾರಿಗಳಿಗೆ ಸಾಮಾಜಿಕ ಕಳಕಳಿ ಇರಬೇಕೆಂಬುದು ಸದನ ಸಮಿತಿಯ ಮನವಿಯಾಗಿದೆ: ಪಿ.ಎಂ. ನರೇಂದ್ರಸ್ವಾಮಿ

**ಸಿಹಿ ಕಹಿ ಸುದ್ದಿ**

**ಹೊಸಪೇಟೆ :** ವಿವಿಧ ಇಲಾಖೆಗಳ ಅನುಷ್ಠಾನ ಅಧಿಕಾರಿಗಳು ಸಾಮಾಜಿಕ ಕಳಕಳಿ ಇಟ್ಟುಕೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯೋಜನೆಗಳ ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮುಂದಾಗಬೇಕು ಎನ್ನುವ ಬದ್ಧತೆಯನ್ನು ಹೊಂದಿ ಕಾರ್ಯನಿರ್ವಹಿಸ ಬೇಕು ಎಂಬುದು ಸದನ ಸಮಿತಿಯ ಮನವಿಯಾಗಿದೆ ಎಂದು ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಪಿ.ಎಂ. ನರೇಂದ್ರಸ್ವಾಮಿ ಅವರು ಹೇಳಿದರು.

ವಿಧಾನಸ ಭಾ ಸದಸ್ಯರು ಹಾಗೂ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸದಸ್ಯರಾದ ಕೃಷ್ಣ ನಾಯಕ, ಜಗದೇವ್ ಗುತ್ತೇದಾರ್, ಐಹೊಳೆ ದುರ್ಯೋಧನ, ಬಸವರಾಜ್ ಮತ್ತಿಮೂಡ್, ಶಾಂತರಾಮ್ ಬುಡ್ನಸಿದ್ದಿ ಅವರ ಸಮ್ಮುಖದಲ್ಲಿ ಬಳ್ಳಾರಿ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಸೆ. 27 ರಂದು ನಡೆದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ವಿಜಯನಗರ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿಕ್ಷಣ ದಿಂದಲೇ ಎಲ್ಲವೂ ಎಂಬುದನ್ನು ಪ್ರತಿಯೊಬ್ಬರು ಅರಿಯಬೇಕು. ಉತ್ತಮ ಶಿಕ್ಷಣ ಸಿಗದ ಮಕ್ಕಳಿಂದಲೇ ನಾಳೆ ಸಮಾಜ ಘಾತುಕ ಕೆಲಸ ನಡೆಯುತ್ತವೆ ಎಂಬ ಎಚ್ಚರಿಕೆ ಹೊಂದಿ ಅವಕಾಶ ವಂಚಿತ ಮಕ್ಕಳಿಗೆ ಉತ್ತಮ ರೀತಿಯಲ್ಲಿ ಶಿಕ್ಷಣ ಸಿಗುವ ಹಾಗೆ ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಕಾಲೇಜು ಶಿಕ್ಷಣ ಇಲಾಖೆಯ ಅಧಿಕಾರಿಗಳು ಮುತುವರ್ಜಿ ವಹಿಸಬೇಕು. ಈ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ವಸತಿ ನಿಲಯದಲ್ಲಿನ ವಿದ್ಯಾರ್ಥಿಗಳ ಶಿಕ್ಷಣ ಚಟುವಟಿಕೆಗಳ ಬಗ್ಗೆ ಗಮನ ಹರಿಸಬೇಕು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ವಿದ್ಯಾರ್ಥಿಗಳಿಗೆ ಬಾಲ್ಯದಲ್ಲಿ ಗುಣಮಟ್ಟದ ಶಿಕ್ಷಣ ಸಿಗಬೇಕು. ಇತರ ವಿದ್ಯಾರ್ಥಿಗಳ ಹಾಗೆ ಬೆಳೆಯ ಬೇಕು. ಈ ದೇಶದ ಸಂಪತ್ತಾಗ ಬೇಕು. ಇಂತಹ ಜನಪರ ಆಲೋಚನೆಗಳನ್ನು ಹೊಂದಿ ಮುಖ್ಯವಾಗಿ ಅಂಗನವಾಡಿ ಶಿಕ್ಷಣ ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿ ಎಸ್ಸಿ/ಎಸ್ಸಿ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಮಾಡಲು ಕ್ರಮವಹಿಸ ಬೇಕು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಅಧ್ಯಕ್ಷರು ನಿರ್ದೇಶನ ನೀಡಿದರು.

ಬಹುತೇಕ ಜನರಿಗೆ ಅವಕಾಶ ಸಿಗದ ಈ ಜಗತ್ತಿನಲ್ಲಿ ಸಮಾಜ ಸೇವೆ ಮಾಡುವ ಅವಕಾಶ ಅಧಿಕಾರಿಗಳಿಗೆ ಸಂವಿಧಾನ ಬದ್ಧವಾಗಿ ಸಿಕ್ಕಿರುತ್ತದೆ. ಇದನ್ನು ಪ್ರತಿಯೊಂದು ಇಲಾಖೆಯ ಅಧಿಕಾರಿಗಳು ಅರಿತು ಸಮಾಜ ಮುಖಿ ಆಲೋಚನೆಯನ್ನು ಇಟ್ಟುಕೊಂಡು ಅವಕಾಶ ವಂಚಿತ ಜನರ ಯೋಜನೆಗಳ ಅನುಷ್ಠಾನಕ್ಕೆ ಶ್ರಮಿಸಬೇಕು. ಕಾಲ ಕಾಲಕ್ಕೆ ಶಾಲಾ–ಕಾಲೇಜುಗಳು ಮತ್ತು ವಸತಿ ನಿಲಯಗಳಿಗೆ



ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಓ ಮತ್ತು ಸಮಾಜ ಕಲ್ಯಾಣ ಇಲಾಖೆ, ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚನೆ ನೀಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದವರ ಅರ್ಜಿಗಳ ಬಗ್ಗೆ ಗಮನ ಹರಿಸಿ ಸ್ಮಶಾನ ಭೂಮಿ ಮಂಜೂರಾತಿಗೆ ಒತ್ತು ಕೊಡಬೇಕು ಎಂದು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚನೆ ನೀಡಿದರು.

ಹಗರಿಬೊಮ್ಮನಹಳ್ಳಿ ತಾಲೂಕಿನ ಕೆಂಚಟನ ಹಳ್ಳಿಯಲ್ಲಿ ಈಗಾಗಲೇ ಸ್ಮಶಾನಭೂಮಿ ಕಾಯ್ದಿರಿಸಲಾಗಿದೆ. ಹಗರಿಬೊಮ್ಮನಹಳ್ಳಿ ತಾಲೂಕಿನ ಮೋರಿಗೇರಿ, ಹರಪನಹಳ್ಳಿ ತಾಲೂಕಿನ ತಿಮ್ಮಲಾಪುರ, ಹಡಗಲಿ ತಾಲೂಕಿನ ಬಸರಕೋಡ ಗ್ರಾಮದಲ್ಲಿ ಸ್ಮಾಶಾನಕ್ಕಾಗಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಸ್ಮಶಾನ ಸೌಲಭ್ಯಕ್ಕೆ ಕ್ರಮ ವಹಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ವಿಜಯನಗರ ಜಿಲ್ಲೆಯಲ್ಲಿ ಕಂದಾಯ ಗ್ರಾಮ ರಚನೆಯ ಪ್ರಗತಿಯ ಬಗ್ಗೆ ಅಧ್ಯಕ್ಷರು ಕೇಳಿದರು. ವಿಜಯನಗರ ಜಿಲ್ಲೆಯಲ್ಲಿ ದಾಖಲೆಯ ಪ್ರಮಾಣದಲ್ಲಿ ಹಟ್ಟಿ, ತಾಂಡಾ ಮತ್ತು ಇನ್ನಿತರ ಪ್ರದೇಶಗಳನ್ನು ಹೊಸಕಂದಾಯಗ್ರಾಮವನ್ನಾಗಿ ಘೋಷಿಸುವ ಪ್ರಕ್ರಿಯೆ ನಡೆಯುತ್ತಿದೆ. 110 ತಾಂಡಾಗಳನ್ನು ಕಂದಾಯ ಗ್ರಾಮವನ್ನಾಗಿ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಪ್ರಸಕ್ತ ವರ್ಷದಲ್ಲಿ ಬಾಕಿ ಇರುವ ಎಲ್ಲ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆಯ ಕಾರ್ಯ ನಡೆಯುತ್ತಿದೆ ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ದೌರ್ಜನ್ಯ ಪ್ರಕರಣಗಳಿಗೆ ಕಡಿವಾಣ ಹಾಕಬೇಕು ಎಂದು ಅಧ್ಯಕ್ಷರು ತಿಳಿಸಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ಜನರ ಮೇಲೆ ದೌರ್ಜನ್ಯ ಪ್ರಕರಣಗಳು ದಾಖಲಾದ ಕೂಡಲೇ ಪೊಲೀಸ್ ಇಲಾಖೆ ಯಿಂದ ನಿಯಮಾನುಸಾರ ಕ್ರಮ ವಹಿಸಲಾಗುತ್ತದೆ. ತಪ್ಪಿತಸ್ಥರನ್ನು ನಿಯಮಾನುಸಾರ ಶಿಕ್ಷೆಗೆ ಗುರಿ ಪಡಿಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್. ಅವರು ತಿಳಿಸಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದವರ ಜಮೀನುಗಳಿಗೆ ರಸ್ತೆ ಸಂಪರ್ಕಕ್ಕಾಗಿ ದೂರು ಬಂದಿರುವ ಅರ್ಜಿಗಳ ಬಗ್ಗೆ ಗಮನ ಹರಿಸಬೇಕು. ಜೆಸ್ಕಾಂ ಅಧಿಕಾರಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಜನ ವಸತಿ ಪ್ರದೇಶಕ್ಕೆ ತೆರಳಿ ಅಲ್ಲಿನ ಕುಂದು ಕೊರತೆಗಳ ಬಗ್ಗೆ ಪರಿಶೀಲಿಸ ಬೇಕು ಎಂದು ಹೂವಿನಹಡಗಲಿ ಶಾಸಕರು ಮತ್ತು ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸದಸ್ಯರಾದ ಕೃಷ್ಣ ನಾಯಕ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಮೀನುಗಳಿಗೆ ರಸ್ತೆ ಸಂಪರ್ಕಕ್ಕೆ ಸಂಬಂಧಿಸಿದಂತೆ ವಿಜಯನಗರ ಜಿಲ್ಲೆಯಲ್ಲಿ ಒಟ್ಟು 34 ದೂರು ಅರ್ಜಿಗಳು ಬಂದಿದ್ದು, ಗ್ರಾಮ ನಕಾಶೆಯನ್ವಯ ನಕ್ಷೆ ಇರುವುದನ್ನು ಪರಿಶೀಲಿಸಿ ಅರ್ಜಿಗಳ ವಿಲೇವಾರಿ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಪ್ರತಿಕ್ರಿಯಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಹೆಚ್ಚಾಗಿ ವಾಸಿಸುವ ಕಾಲೋನಿಗಳಲ್ಲಿ ಹಳೆಯದಾದ ಪೈಪುಗಳಿಗೆ ಸಂಪರ್ಕ ಕಲ್ಪಿಸಿ ಜಲಜೀವನ ಮಿಷನ್ ಕಾಮಗಾರಿ ಮಾಡಲಾಗುತ್ತಿದೆ ಎನ್ನುವ ದೂರುಗಳನ್ನು ಅಧಿಕಾರಿಗಳು ಗಂಭೀರವಾಗಿ ಪರಿಶೀಲಿಸ ಬೇಕು ಎಂದು ಅಧ್ಯಕ್ಷರು ಸೂಚನೆ ನೀಡಿದರು. ನಿಗದಿ ಪಡಿಸಿದ ಮೊತ್ತದ ಮಿತಿಯೊಳಗಿನ ಕಾಮಗಾರಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿದ ಗುತ್ತಿಗೆದಾರರಿಗೆ ನೀಡಬೇಕು ಎನ್ನುವ ಮೀಸಲು ನಿಯಮವನ್ನು ಉದ್ದೇಶ ಪೂರ್ವಕವಾಗಿ ಉಲ್ಲಂಘಿಸುವುದು ಕಂಡು ಬಂದಲ್ಲಿ ಅಂತವರನ್ನು ಕಠಿಣವಾದ ಕಾನೂನು ಕ್ರಮಕ್ಕೆ ಗುರಿ ಪಡಿಸಬೇಕಾಗುತ್ತದೆ. ಹೀಗಾಗಿ ಮೀಸಲು ಪಾಲನೆಗೆ ಒತ್ತು ಕೊಡಬೇಕು ಎಂದು ಪಂಚಾಯತ್ ರಾಜ್ಯ ಎಂಜಿನಿಯರಿಂಗ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಭಿಯಂತರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು. ಸಭೆಯಲ್ಲಿ ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಅರಣ್ಯ ಇಲಾಖೆ ಸೇರಿದಂತೆ ನಾನಾ ಇಲಾಖೆಗಳ ಬಗ್ಗೆ ಅಧ್ಯಕ್ಷರು ಮತ್ತು ಸದಸ್ಯರು ಪ್ರಗತಿ ಪರಿಶೀಲನೆ ನಡೆಸಿದರು. ಸಭೆಯಲ್ಲಿ ಕರ್ನಾಟಕವಿಧಾನಸಭೆಸಚಿವಾಲಯದಅಧೀನ ಕಾರ್ಯದರ್ಶಿ ಪಿ.ಸೀನ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ ಶಾ, ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅರ್ಸಲಾನ್, ಸಹಾಯಕ ಆಯುಕ್ತರಾದ ವಿವೇಕಾನಂದ ಪಿ.ಚಿದಾನಂದ ಗುರುಸ್ವಾಮಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ನಗರ ಸಭೆ ಪೌರಾಯುಕ್ತರಾದ ಚಂದ್ರಪ್ಪ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ಎಸ್.ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಇದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಟಿ.ಎಚ್.ಎಂ ರಾಜಕುಮಾರ್.ಕಂಪ್ಲಿ.ಬಳ್ಳಾರಿ**

# ಕಚೇರಿ ಕೆಲಸದ ಜೊತೆ ಕ್ರೀಡೆಯಿಂದ ಮಾನಸಿಕ ಒತ್ತಡ ನಿವಾರಣೆ



**ಮಾನ್ವಿ :** ಸರಕಾರಿ ನೌಕರರು ಕಚೇರಿಯಲ್ಲಿ ಕೆಲಸ ಮಾಡುವುದರ ಜೊತೆಗೆ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದಾಗ ಮಾನಸಿಕ ಒತ್ತಡ ನಿವಾರಣೆ ಯಾಗಲಿದೆ ಎಂದು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಮಾನ್ವಿ ಅಧ್ಯಕ್ಷ ಹನುಮಂತರಾಯ ಕುಲಕರ್ಣಿ ತಿಳಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ತಾಲೂಕ ಕ್ರೀಡಾಂಗಣದಲ್ಲಿ ನಾನಾ ಇಲಾಖೆಯ ಸರಕಾರಿ ನೌಕರರು ಹಮ್ಮಿಕೊಂಡಿದ್ದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.

ಸರಕಾರಿ ನೌಕರರು ಕುಟುಂಬ ಹಾಗು ಕಚೇರಿಯ ಒತ್ತಡದ ನಡುವೆ ಕೆಲಸ ಮಾಡುವಂತ ಪರಿಸ್ಥಿತಿ ಇದ್ದು, ಹೀಗಾಗಿ ನಿತ್ಯ ವ್ಯಾಯಾಮ ಹಾಗು ಆಟಗಳನ್ನು ಆಡಿದಾಗ ಮಾತ್ರ ಮನಸ್ಸಿಗೆ ನೆಮ್ಮದಿ ಸಿಗಲಿದೆ ಎಂದರು. ಸರಕಾರಿ ಅಧಿಕಾರಿಗಳು ಕ್ರಿಕೆಟ್ ಹಮ್ಮಿಕೊಂಡಿರುವುದು ಶ್ಲಾಘನೀಯ, ಇದೆ ರೀತಿಯಲ್ಲಿ ಸರಕಾರಿ ನೌಕರರು ಸಹ ಬೇರೆ ಬೇರೆ ರೀತಿಯ ಆಟಗಳನ್ನು ಹಮ್ಮಿಕೊಳ್ಳಬೇಕೆಂದು ಸಲಹೆ ನೀಡಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಹುಸೇನ್ ಭಾಷಾನಕ್ಕುಕದಿ.ಮಾನ್ವಿ**

# ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನ ಆಚರಣೆ

**ಬಾಗಲಕೋಟೆ :** ಆತ್ಮಹತ್ಯೆ ಒಂದು ಸಾಮಾಜಿಕ ಪಿಡುಗಾಗಿದ್ದು ಅದನ್ನು ಎಲ್ಲರೂ ಸೇರಿ ತಡೆಗಟ್ಟಬೇಕು ಎಂದು ಬಸವೇಶ್ವರ ನರ್ಸಿಂಗ್ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಪ್ರೊ.ಜಯಶ್ರೀ ಇಟ್ಟಿಯವರು ಹೇಳಿದರು. ನಗರದಲ್ಲಿ ಬಸವೇಶ್ವರ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯ ಸಭಾಂಗಣದಲ್ಲಿ ನೆಡೆದ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಲ್ಲ ಸಮಸ್ಯೆಗಳಿಗೆ ಆತ್ಮಹತ್ಯೆ ಪರಿಹಾರವಲ್ಲ. ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹಲವಾರು ದಾರಿಗಳಿದ್ದು ಅದನ್ನು ಹುಡುಕುವ ಪ್ರಯತ್ನವಾಗಬೇಕು. ಇವತ್ತಿನ ಯುವ ಪೀಳಿಗೆ ಸಣ್ಣ ಸಣ್ಣ ವಿಚಾರಗಳಿಗೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಈ ನಿಟ್ಟಿನಲ್ಲಿ ಜನರಲ್ಲಿ ಆತ್ಮಹತ್ಯೆಯನ್ನು ತಡೆಗಟ್ಟುವ



ವಿಧಾನಗಳ ಬಗ್ಗೆ ಜಾಗೃತಿ ಮೂಡಿಸಬೇಕೆಂದು ತಿಳಿಸಿದರು.


ಮ ಹಾ ವಿ ದ್ಯಾ ಲ ಯ ದ ಮನೋವೈದ್ಯಕೀಯ ವಿಭಾಗದ ಅಧ್ಯಾಪಕರಾದ ಶ್ರೀಮತಿ ಪೂರ್ಣಿಮಾ ಮೇಟಿ ಅವರು ವಿದ್ಯಾರ್ಥಿಗಳಿಗೆ ಆತ್ಮಹತ್ಯೆಯ ಹಲವಾರು ಕಾರಣಗಳಾದ ಸಾಮಾಜಿಕ, ಆರ್ಥಿಕ, ಕೌಟುಂಬಿಕ, ಉದ್ಯೋಗ ಸಮಸ್ಯೆ, ಶೈಕ್ಷಣಿಕ ಹಾಗೂ ಮಾನಸಿಕ ಹಾಗೂ ದೈಹಿಕ ಅನಾರೋಗ್ಯ ಸಮಸ್ಯೆಗಳ ಬಗ್ಗೆ ಹಾಗೂ ಆತ್ಮಹತ್ಯೆ ತಡೆಗಟ್ಟುವ ಹಲವಾರು ಪರಿಹಾರ ಮಾರ್ಗಗಳ ಬಗ್ಗೆ ಮಾಹಿತಿ ನೀಡಿ, ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 10.67% ಜನ ಆತ್ಮಹತ್ಯೆಗೆ ಒಳಗಾಗಿದ್ದಾರೆ. ಉದ್ಯೋಗ ಸಿಗದೇ ಆತ್ಮಹತ್ಯ ಮಾಡಿಕೊಂಡವರು 7.5% , ಪರೀಕ್ಷೆಯಲ್ಲಿ ಫೇಲಾದ ವಿದ್ಯಾರ್ಥಿಗಳು 5.5% , ಒಕ್ಕಲಿಗರು 7.7% , ಪ್ರತಿ 40 ನಿಮಿಷಕ್ಕೆ ಒಬ್ಬ ವ್ಯಕ್ತಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಆತ್ಮಹತ್ಯೆ ನಿವಾರಣೆಯ ಕುರಿತು ಜನರಲ್ಲಿ ಜಾಗೃತಿಯ ಅವಶ್ಯವದೆ ಎಂದು ಹೇಳಿದರು. ಆತ್ಮಹತ್ಯೆ ತಡೆಗಟ್ಟುವ ಕುರಿತು ಹಮ್ಮಿಕೊಳ್ಳಲಾದ ಮೈಮ್ ಶೋ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಮಹಾವಿದ್ಯಾಲಯದ ಜಿ. ಎನ್. ಎಮ್. ದ್ವಿತೀಯ ವರ್ಷದ ವಿದ್ಯಾರ್ಥಿಗಳು ಕಿರು ನಾಟಕದ ಮೂಲಕ ಆತ್ಮಹತ್ಯೆ ಒಂದು ಮಹಾಪಾಪ ಅದರಿಂದ ಸಂಪೂರ್ಣ ನಿವಾರಣೆಯನ್ನು ಹೊಂದಬೇಕೆಂಬುದನ್ನು ತಿಳಿಸಿದರು.

ಮಹಾವಿದ್ಯಾಲಯದ ಎಲ್ಲ ಬೋ ಧ ಕ – ಬೋ ಧ ಕೇ ತ ರ ಸಿಬ್ಬಂದಿ ವರ್ಗದವರು ಹಾಗೂ ಎಲ್ಲ ನರ್ಸಿಂಗ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ದುಶ್ಚಟಗಳಿಗೆ ದಾಸರಾದಂತ ವ್ಯಕ್ತಿಗಳ ಒಳಿತಿಗಾಗಿ ಮದ್ಯ ವ್ಯಸನೀಯರಿಗೆ ಬಿಡುಗಡೆಯಿಂದ ಮುಕ್ತರಾಗಲು: ಇಂಥಹ ಶಿಬಿರ ಅತ್ಯ ಅವಶ್ಯಕತೆ ಶಾಸಕ ಡಾ, ಶ್ರೀ ನಿವಾಸ್ ಎನ್.ಟಿ.

**ಸಿಹಿ ಕಹಿ ಸುದ್ದಿ,**

**ಕೂಡ್ಲಿಗಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದ ಕೊಟ್ಟೂರು ರಸ್ತೆಯಲ್ಲಿ ಬರುವ ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯ ಭವನದಲ್ಲಿ ನಡೆದ ಮದ್ಯವರ್ಜನ ಶಿಬಿರ ವ್ಯವಸ್ಥಾಪನಾ ಸಮಿತಿ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ. ಟ್ರಸ್ಟ್ ಹಮ್ಮಿ ಕೊಂಡಿರುವ 1853 ನೇ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭವನ್ನು ಶಾಸಕರಾದ ಡಾ. ಶ್ರೀನಿವಾಸ್. ಎನ್. ಟಿ. ಅವರು ಉದ್ಘಾಟಿಸಿ ಮಾತನಾಡಿದರು. ಜೀವ ಸಂಕುಲದಲ್ಲಿ ಮನುಷ್ಯ ಕುಲ ಅತ್ಯಂತ ಶ್ರೇಷ್ಠವಾದದ್ದು. ನಮ್ಮಲ್ಲಿ ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರ ಎಂಬ ಮಾತನ್ನು ಪುರಂದರದಾಸರು ಹೇಳಿದ್ದಾರೆ. ನಮ್ಮ ಜೀವನಕ್ಕೆ ಏನೂ ಬೇಕು ಅದನ್ನು ಪಡೆದು ಕೊಂಡು ಒಳ್ಳೆಯ ರೀತಿಯಲ್ಲಿ ಒಳ್ಳೆಯ ಜೀವನ ರೂಪಿಸಿ ಕೊಳ್ಳುವ ದಾರಿಯಲ್ಲಿ ಸಾಗಬೇಕಾಗಿದೆ ಎಂದೂ ತಿಳಿ ಹೇಳಿದರು. ನಮ್ಮಲ್ಲಿ ದುಶ್ಚಟಗಳಿಗೆ ದಾಸರಾದಂತಹ ವ್ಯಕ್ತಿಗಳ ಒಳಿತಿಗಾಗಿ ಎರಡು ಸಂಸ್ಥೆಗಳು ಸೇರಿ ಶಿಬಿರವನ್ನು ಹಮ್ಮಿಕೊಂಡು ಪ್ರಾಯೋಗಿಕವಾಗಿ ವೈದ್ಯರ ಸಲಹೆಯನ್ನು ಗಮನದಲ್ಲಿಟ್ಟು ಕೊಂಡು ಸರಿ ದಾರಿಗೆ ತರುವ ಹಾಗೂ ಸಮಾಜದಲ್ಲಿ ಆಗುತ್ತಿರುವ ತಪ್ಪುಗಳನ್ನು ತಿದ್ದುವ ನಿಟ್ಟಿನಲ್ಲಿ ವೈಚಾರಿಕ ಅರಿವು



ಮೂಡಿಸುತ್ತಿರುವ ಕೆಲಸ ಮೆಚ್ಚುವಂತದ್ದು ಎಂದೂ ತಿಳಿಸಿದರು. ಈ ಸಂದರ್ಭದಲ್ಲಿ ಉಪ ತಹಶೀಲ್ದಾರರಾದ ನೇತ್ರಾವತಿ, ಶ್ರೀ ಶರಣ ಬಸವೇಶ್ವರ ದಾಸೋಹ ಮಠದ ಶ್ರೀ ದಾ. ಮ. ಐಮಡಿ ಶರಣಾರ್ಯ ಸ್ವಾಮೀಜಿಗಳು. ಪ.ಪಂ. ಅಧ್ಯಕ್ಷರಾದ ಕಾವಲ್ಲಿ ಶಿವಪ್ಪ ನಾಯಕ, ಪ.ಪಂ ಮುಖ್ಯಧಿಕಾರಿಗಳು ಸಹ ಶಿಬಿರದ ಕಾರ್ಯಕ್ರಮ ಕುರಿತು ಮಾತನಾಡಿದರು. ಹಾಗೆ ಈ ಸಂದರ್ಭದಲ್ಲಿ ಪ.ಪಂ. ಸಸದಸ್ಯರು, ಬಣಕಾರ ವೀರಣ್ಣ ಕುಪ್ಪಿನಕೆರೆ, ಮುಖಂಡರು, ಶಿಬಿರಾರ್ಥಿಗಳು, ವಿವಿಧ ಸಂಘಗಳ ಮಹಿಳಾ ಸದಸ್ಯರು, ಸಾರ್ವಜನಿಕರು, ಇನ್ನೂ ಮುಂತಾದವರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನೆಲ್:ರಾಘವೇಂದ್ರ.ಬಿ. ಸಾಲುಮನೆ. ಕೂಡ್ಲಿಗಿ.ವಿಜಯನಗರ**

# ಹೇಮ–ಹೇಮ ಸೌಹಾರ್ದ ಸಹಕಾರಿ ಸಂಘವು 6ನೇ ವರ್ಷದಲ್ಲಿಯೇ 11 ಲಕ್ಷ 41 ಸಾವಿರ ರೂ.ಗಳ ನಿವ್ವಳ ಲಾಭ

**ಬೀಳಗಿ :** ಸಹಕಾರಿ ಸಂಘ ಸಂಸ್ಥೆಗಳು ಗ್ರಾಮೀಣ ಭಾಗದ ಜನರಿಗೆ ಆರ್ಥಿಕವಾಗಿ ಸಹಾಯ ಮಾಡುವಲ್ಲಿ ತಮ್ಮದೇಯಾದ ಕೊಡುಗೆ ನೀಡುತ್ತಾ– ಎಲ್ಲರ ಸಹಕಾರದಿಂದ ಹೇಮ–ಹೇಮ ಸೌಹಾರ್ದ ಸಹಕಾರಿ ಸಂಘವು 6ನೇ ವರ್ಷದಲ್ಲಿಯೇ 11ಲಕ್ಷ 41 ಸಾವಿರ ರೂಗಳ ನಿವ್ವಳ ಲಾಭಗಳಿಸಿದೆ ಎಂದು ಸಂಘದ ಅಧ್ಯಕ್ಷರಾದ ಹಣಮಂತ ಸೊನ್ನದ ಹೇಳಿದರು.

ತಾಲೂಕಿನ ಬಾಡಗಿ ಗ್ರಾಮದ ಸಮುದಾಯ ಭವನದಲ್ಲಿ ಶನಿವಾರ ಹೇಮ–ಹೇಮ ಸೌಹಾರ್ದ ಸಹಕಾರಿ ಸಂಘದ 2023–24ನೇ ಸಾಲಿನ 6ನೇ ವಾರ್ಷಿಕ ಸರ್ವ ಸಾಧಾರಣ ಸಭೆಂ ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಮ್ಮ ಸಂಘದಲ್ಲಿ 66 ಲಕ್ಷ 5 ಸಾವಿರ ಶೇರು ಬಂಡವಾಳ. 14 ಕೋಟಿ 42 ಲಕ್ಷ



ರೂಗಳ ಠೇವು. 12 ಕೋಟಿ 67 ಲಕ್ಷ ರೂಗಳ ದುಡಿಯುವ ಬಂಡವಾಳ ಹೊಂದಿದ್ದು ಸಂಘದ ಬೆಳವಣಿಗೆ ಆಡಳಿತ ಮಂಡಳಿ ನಿರ್ದೇಶಕರ ಸಲಹೆ ಹಾಗೂ ಗ್ರಾಹಕರ ಮತ್ತು ಠೇವುದಾರರ ಪ್ರೀತಿ ವಿಶ್ವಾಸ ಹಾಗೂ ಸಂಘದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ವರ್ಗದವರು ಪ್ರಾಮಾಣಿಕ ನಿಷ್ಠೆಯಿಂದ ಕಾರ್ಯನಿರ್ವಹಿಸಿದ ಪ್ರಯುಕ್ತ ನಮ್ಮ ಸಂಘವು ಅಭಿವೃದ್ಧಿಯಲ್ಲಿ ಗುರಿ ಸಾಧಿಸುತ್ತಾ ಬಂದಿದೆ ಎಂದರು.

ಬಾಗಲಕೋಟೆ ನಗರ ಸಭೆ ಅಧ್ಯಕ್ಷೆ ಸವಿತಾ ಅನ್ನಪ್ಪ ಲಂಕ್ಕೆನ್ನವರ ಸನ್ಮಾನ ಸ್ವೀಕರಿಸಿ ಮಾತನಾಡಿ, ಸಹಕಾರಿ ಸಂಘ ಸಂಸ್ಥೆಗಳು ಬೆಳೆಯಬೇಕಾದರೆ ಎಲ್ಲ ಸಹಕಾರ ಅಗತ್ಯ. ನಾನು ಕೂಡಾ ನಿಮ್ಮ ಮನೆಯ ಮಗಳು. ನನ್ನ ವ್ಯಾಪ್ತಿಯಲ್ಲಿ ಯಾವುದೇ ಕೆಲಸ ಕಾರ್ಯಗಳು ಇದ್ದರೆ ಸಹಾಯ ಸಹಕಾರ ಮಾಡುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಅಮಲಝರಿಯ ಜ್ಞಾನಮಯಾನಂದ ಶ್ರೀಗಳು ಹಾಗೂ ಬಾಡಗಿಯ ಬಕ್ಕಯ್ಯ ಮಹಾಸ್ವಾಮಿಗಳು ಶ್ರೀಗಳು ದಿವ್ಯ ಸಾನಿಧ್ಯ ವಹಿಸಿ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಮಕ್ಕೆ ಚಾಲನೆ ನೀಡಿದರು.

ಉಪಾಧ್ಯಕ್ಷ ಯಂಕಪ್ಪ ಲೆಂಕಣ್ಣವರ, ನಂದಿ ಶುಗರ್ಸ್ ಉಪಾದ್ಯಕ್ಷ ಅಶೋಕ ಲೆಂಕಣ್ಣವರ, ಇನಾಂ ಹಂಚಿನಾಳ ಪಿಕೆಪಿಎಸ್ ಅಧ್ಯಕ್ಷ ಸಿದ್ದುಗೌಡ ಕೋಮಾರದೇಸಾಯಿ, ನಿ ರ್ದೇ ಶ ಕ ರಾ ದ ರಾ ಜೇ ಶ ನಾಯಿಕ, ಚಂದ್ರಶೇಖರ ನಾಯಕರ, ಅಜೀತ ನಾಯಕ, ತಿಮಣ್ಣ ಸಂಗನ್ನವರ, ಅಪ್ಪಣ್ಣ ವಾಲಿ, ಗಿರೀಶ ಬದರಿ, ವಿನೋದ ನಾಯಕರ, ಶಾಸಪ್ಪ ಕೇಸನೂರ, ಸುಜಾತಾ ಸಿಂಗರಡ್ಡಿ, ಕಸ್ತೂರಿ ಗುರಾಣಿ, ಮು ಖ್ಯ ಕಾ ರ್ಯ ನಿ ರ್ವಾ ಹ ಕ ವೀರಣ್ಣ ಜಕರಡ್ಡಿ, ಹಣಮಂತ ಪಾಂಡಪ್ಪ ಜಕರಡ್ಡಿ, ವೆಂಕಪ್ಪ ತಿಮ್ಮಣ್ಣ ಸಿಂಗರಡ್ಡಿ, ಚೇತನ ಮೆಟ್ಟಗುಡ್ಡ, ವಿಠ್ಠಲ ಸಿಂಗರಡ್ಡಿ ಇದ್ದರು.

ಇ ದ , ಸಂದರ್ಭದಲ್ಲಿ ಉತ್ತಮ ಗ್ರಾಹಕರಿಗೆ, ಠೇವುದಾರರಿಗೆ ಹಾಗೂ ಪಿಯು, ಎಸ್.ಎಸ್.ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿಧ್ಯಾರ್ಥಿಗಳಿಗೆ ಸನ್ಮಾನ ಮಡಲಾಯಿತು.

## ರೈತ ಹಾಗೂ ನೇಕಾರ ಪರ ಶ್ರಮಿಸಿರುವ ಹೆಮ್ಮೆಯಿದೆ



**ರಬಕವಿ-ಬನಹಟ್ಟಿ :** ರಬಕವಿಯ ಪಿಕೆಪಿಎಸ್ ಸಂಘವು ಕಳೆದ 11 ವರ್ಷಗಳಿಂದ ಈ ಭಾಗದ ರೈತರ ಹಾಗು ನೇಕಾರ ಸಮುದಾಯಕ್ಕೆ ಶ್ರಮಿಸುವಲ್ಲಿ ಯಶಸ್ವಿ ಕಂಡಿದ್ದು, ಪ್ರಸಕ್ತ ವರ್ಷ ಉತ್ತಮ ಲಾಭದತ್ತ ಕೊಂಡೊಯ್ಯುವಲ್ಲಿ ಶೇರುದಾರರ ಪಾತ್ರ ಹಿರಿದಾಗಿದೆ ಎಂದು ಸಂಘದ ಉಪಾಧ್ಯಕ್ಷ ಸುಭಾಸ ಮಧುರಖಂಡಿ ತಿಳಿಸಿದರು.

ರಬಕವಿಯ ದಾನಮ್ಮದೇವಿ ಸಮುದಾಯ ಭವನದಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶೇರುದಾರರ ಬಡ್ಡಿಯ ಹಣದಿಂದಲೇ ಸಂಘವು ಅಭಿವೃದ್ಧಿಗೆ ಕಾರಣವಾಗುತ್ತದೆ. ರೈತರಿಗೆ ಶೂನ್ಯ ಬಡ್ಡಿ ದರದಲ್ಲಿನ ಸಾಲ ಸೌಲಭ್ಯದಿಂದ ಸರ್ಕಾರ ಕೊಡ ಮಾಡುವ ಬಡ್ಡಿಯ ವ್ಯವಸ್ಥೆ ಸಮರ್ಪಕವಾಗಿ ದೊರೆತಲ್ಲಿ ಉತ್ತಮ ಲಾಭಗಳಿಕೆಗೆ ಸಂಘವು ಯಶಸ್ವಿಯಾಗುವದೆಂದರು.ಸಂಘದ ಅಧ್ಯಕ್ಷ ಮಾರುತಿ ನಾಯಕ ಮಾತನಾಡಿ, ರೈತರಿಗೆ ಈಗಾಗಲೇ 57 ಸಾವಿರ ರೂ.ಗಳಷ್ಟು ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ. ನೆರೆಯ ಜಿಲ್ಲೆಯಂತೆ ಇಲ್ಲಿಯೂ ಗರಿಷ್ಠ 1 ಲಕ್ಷ ರೂ.ಗಳಿಗೆ ವಿಸ್ತರಿಸಬೇಕೆಂಬ ಒತ್ತಾಯವಿದ್ದು, ಈ ಕುರಿತು ಮೇಲಧಿಕಾರಿಗಳಿಗೆ ಒತ್ತಡ ತರುವ ಮೂಲಕ ಮುಂದಿನ ದಿನಗಳಲ್ಲಿ ಸಾಲ ವಿಸ್ತರಣೆ ಮಾಡಲಾಗುವದೆಂದರು.

ಡಾ. ಕಲ್ಲಪ್ಪ ಕುಚನೂರ, ವಿವೇಕ ಕೋಪರ್ಡೆ, ಗಂಗಾಧರ ಹುಲಕುಂದ, ಮಲ್ಲಪ್ಪ ಚೌಲಗಿ, ಶ್ರೀಕಾಂತ ವಾಘಮೊರೆ, ಅನುಸೂಯಾ ಅರಿಕೇರಿ, ಮಹಾಲಿಂಗಪ್ಪ ಪಾಟೀಲ ವೇದಿಕೆ ಮೇಲಿದ್ದರು.

ಇದೇ ಸಂದರ್ಭ ತಾಲೂಕಿನಾದ್ಯಂತ ಗೋಸೇವಾ ರಕ್ಷಣೆಯಲ್ಲಿ ಯಶಸ್ವಿ ಕಾಣುತ್ತಿರುವ ಸಂತೋಷ ಆಲಗೂರ ತಂಡವನ್ನು ಗೌರವಿಸಿ ಸನ್ಮಾನಿಸಲಾಯಿತು.

ಬಾಲಚಂದ್ರ ಕೊಕ್ಕಳಕಿ, ಸುಭಾಸ ಚೋಳಿ, ಸಂಜು ಅಥಣಿ, ಶ್ರೀಶೈಲ ಬುಯ್ಯಾರ, ಸಿದ್ದಪ್ಪ ಮೇಣಿ, ಮಹಾದೇವ ಸೊಲ್ಲಾಪುರ, ಮಹಾಂತೇಶ ತುಂಗಳ, ಈರಪ್ಪ ಮೇಗಾಡಿ, ಮಹಾಲಿಂಗಪ್ಪ ಕುಂಬಾರ ಸೇರಿದಂತೆ ಇತರರಿದ್ದರು.

## ನಾವೆಲ್ಲರೂ ಓಝೋನ್ ರಕ್ಷಣೆ ಮಾಡಬೇಕಿದೆ: ದೇಸಾಯಿ

**ಜಮಖಂಡಿ :** ಪರಿಸರವನ್ನು ಸಂರಕ್ಷಣೆ ಮಾಡುವದರೊಂದಿಗೆ ಓಝೋನ್ ಪದರವನ್ನು ರಕ್ಷಣೆ ಮಾಡಬೇಕಾಗಿದೆ. ಪರಿಸರವನ್ನು ರಕ್ಷಣೆ ಮಾಡಿದರೇ ನಮ್ಮನ್ನು ನಮ್ಮ ಮುಂದಿನ ಪೀಳಿಗೆಯನ್ನು ಸಂರಕ್ಷಣೆ ಮಾಡುತ್ತದೆ ಎಂದು ರೋಟರಿ ಸಂಸ್ಥೆ ಅಧ್ಯಕ್ಷ ಕಿರಣಕುಮಾರ ದೇಸಾಯಿ ಹೇಳಿದರು.

ನಗರದ ಬಾಲಕರ ಸರಕಾರಿ ಪ.ಭಾ ಪದವಿ ಪೂರ್ವ ಕಾಲೇಜಿನಲ್ಲಿ ಗುರುದೇವ ರಾನಡೆ ಇಕೋಕ್ಲಬ್, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಎನ್.ಎಸ್.ಎಸ್ ಘಟಕ ಹಾಗೂ ರೋಟರಿ ಸಂಸ್ಥೆ ಸಹಯೋಗದಲ್ಲಿ ವಿಶ್ವ ಓಝೋನ್ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರೋಟರಿ ಸಂಸ್ಥೆ ವಿಶ್ವದಲ್ಲಿ ಸಾಮಾಜಿಕ ಸೇವೆಗಳಲ್ಲಿ ತೊಡಗಿದೆ. ಪೋಲೀಯೋ ಲಸಿಕೆ ಕಾರ್ಯಕ್ರಮದಲ್ಲಿ ಮಹತ್ತರ ಪಾತ್ರ ವಹಿಸಿದೆ. ರೋಟರಿ ಒಂದು ಕುಟುಂಬವಾಗಿ ನೊಂದವರ, ಬಡವರ ಬೆಳಕಾಗಿ ಕೆಲಸ ಮಾಡುತ್ತಿದೆ. ರೋಟರಿ ಸಂಸ್ಥೆ ಸರಕಾರಿ ಶಾಲೆಗಳನ್ನು ದತ್ತು ಪಡೆದು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿ ಸೇವೆಯಲ್ಲಿ ತೊಡಗಿಕೊಂಡು ಶಿಕ್ಷಣ ಕ್ಷೇತ್ರದ ಉನ್ನತಿಗೆ ಶ್ರಮಿಸುತ್ತಿದೆ ಎಂದರು.



ಮುಧೋಳದ ಜೀವಶಾಸ್ತ್ರ ಉಪನ್ಯಾಸಕ ಡಾ.ಶಿವಾನಂದ ಸಂಕಣ್ಣವರ ಮಾತನಾಡಿ, ಮಾನವನು ಹವಾನಿಯಂತ್ರಿತ, ರೆಫ್ರಿಜಿರೇಟರ್‌ಗಳನ್ನು ಹೆಚ್ಚಾಗಿ ಬಳಸುವದರಿಂದ ಸಿ.ಎಫ್.ಸಿ ಯಂತಹ ಅನಿಲಗಳು ಬಿಡುಗಡೆಯಾಗಿ ಓಝೋನ್ ಪದರಕ್ಕೆ ರಂಧ್ರಗಳಾಗಿ ಸೂರ್ಯನಿಂದ ಬರುವ ಅಪಾಯಕಾರಿ ಕಿರಣಗಳು ಮಾನವನಿಗೆ ಕಾನ್ಸರ್ ನಂತಹ ಮಾರಕ ರೋಗಗಳನ್ನು ಉಂಟು ಮಾಡುತ್ತದೆ. ಇವುಗಳನ್ನು ಮಿತಬಳಕೆ ಮಾಡಿ ನಿಸರ್ಗದತ್ತ ರಕ್ಷಾ ಕವಚವಾದ ಓಝೋನ್ ಪದರನ್ನು ರಕ್ಷಿಸುವುದು ನಮ್ಮೆಲರ ಹೊಣೆಯಾಗಿದೆ ಎಂದರು.

ಬಾಲಕೀಯರ ಸರಕಾರಿ ಪ.ಪೂ.ಕಾಲೇಜಿನ ಪ್ರಾಚಾರ್ಯ ಎಸ್.ಆರ್.ನಾಯ್ಕೋಡಿ ಮಾತನಾಡಿ, ಇಂದು ಪರಿಸರ ಹೆಚ್ಚು ಮಾಲಿನ್ಯವಾಗುತ್ತಿರುವರಿಂದ ಇಂತಹ ಪರಿಸರ ಜಾಗೃತಿ ಕಾರ್ಯಕ್ರಮಗಳು ಬಹಳ ಅವಶ್ಯಕವಾಗಿವೆ ಎಂದರು.

ಪ್ರಾಚಾರ್ಯ ಸುರೇಶ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಉಪನ್ಯಾಸಕ ಅಶೋಕ ರಾಮದುರ್ಗ, ಬಸವರಾಜ ಬಳಗಾರ, ಉಪನ್ಯಾಸಕಿ ಬಿ.ಎಸ್.ಭಾಗೋಜಿ, ವ್ಹಿ.ಆರ್.ಬೊಮ್ಮನಹಳ್ಳಿ, ಎನ್.ಎಸ್.ಎಸ್.ಸಂಯೋಜಕ ಐ.ಎಸ್.ಹೆಬ್ಬಾಳ, ಸುನೀತಾ ಗುಡ್ಡಿ, ಸುನೀಲ ಕೋರೆ, ಶ್ರೀಕಾಂತ ಮಾದರ, ಶಂಕರ ಸಂಗಾನಟ್ಟಿ, ರಾಜು ಗವಳಿ, ಹಣಮಂತ ಕಾಂಬಳೆ ಇದ್ದರು. ಉಪನ್ಯಾಸಕರಾದ ಭವಾನಿ ಗುಗ್ಗರಿ ಪ್ರಾರ್ಥಿಸಿದರು. ಸಿ.ಎಸ್.ಜನಗೊಂಡ ಸ್ವಾಗತಿಸಿದರು. ಡಾ.ಲಿಂಗಾನಂದ ಗವಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು ಪಿ.ಕೆ.ನಾಯ್ಕ ನಿರೂಪಿಸಿದರು ಕೆ.ಎಸ್.ಪೂಜಾರಿ ವಂದಿಸಿದರು. ಇದೇ ಸಂದರ್ಭದಲ್ಲಿ ಓಝೋನ್ ಪದರ ರಕ್ಷಣೆ ಕುರಿತು ನಡೆದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪಶಸ್ತಿ ವಿತರಿಸಲಾಯಿತು.

## ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

**ಜಮಖಂಡಿ :** ಸನ್2024-25ನೇ ಸಾಲಿಗೆ ಹೊಸದಾಗಿ 1ನೇ ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಮೆಟ್ರಿಕ ಪೂರ್ವ ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಹೊಸದಾಗಿ, ಹಿಂದೆ ವಿದ್ಯಾರ್ಥಿ ವೇತನ ಜಮೆ ಆಗದಿರುವ ಮತ್ತು ತಿರಸ್ಕೃತಗೊಂಡ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಸೌಲಭ್ಯ ಪಡೆಯಲು https://ssp.prematric.karnataka.govt.in/2425_SA/signin.aspxಅಥವಾwww.sw.kar.nic.in ಅರ್ಜಿ ಸಲ್ಲಿಸಲು ವಿದ್ಯಾರ್ಥಿಯ ಎಸ್.ಟಿ.ಎಸ್ ಸಂಖ್ಯೆ ಮತ್ತು ಆಧಾರ್‌ಕಾರ್ಡ ಸಂಖ್ಯೆ ಹಾಗೂ ಪಾಲಕ, ಪೋಷಕರ ಆಧಾರ್ ಕಾರ್ಡ್ ಸಂಖ್ಯೆ, ಪಾಲಕ, ಪೋಷಕರ ಮೊಬೈಲ್ ಸಂಖ್ಯೆ, ರಾಷ್ಟ್ರೀಕೃತ ಅಥವಾ ಪೋಸ್ಟ್ ಕಛೇರಿಯಲ್ಲಿ ಖಾತೆ ಸಂಖ್ಯೆ ಆಧಾರ್ ಸೀಡಿಂಗ್ ಮಾಡಿಸಿರಬೇಕು ಹಾಗೂ ತಹಶೀಲ್ದಾರರಿಂದ ನೀಡಲಾದ ಆರ್.ಡಿ.ಸಂಖ್ಯೆ ಹೊಂದಿದ ಜಾತಿ ಹಾಗೂ ಆದಾಯ ಪ್ರಮಾಣ ಪತ್ರದೊಂದಿಗೆ ವೆಬ್ ಸೈಟ್‌ನಲ್ಲಿಅರ್ಜಿ ಸಲ್ಲಿಸಿ ಪ್ರಿಂಟ್ ತೆಗೆದು ಹಾರ್ಡ್ ಕಾಫಿಯೊಂದಿಗೆ ದಾಖಲೆಗಳನ್ನು ಲಗತ್ತಿಸಿ ತಮ್ಮ ಶಾಲೆಯ ಮುಖ್ಯಶಿಕ್ಷಕರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08353-222285, 9480843061 ಸಂಪರ್ಕಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಅರ್ಚನಾ ಸಾನೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಘದಲ್ಲಿರುವ ರೈತರೆಲ್ಲರೂ ನಮ್ಮವರು ನಾನು ನಿಮ್ಮವನು ನಮ್ಮ ಸಹಕಾರಿ ಸಂಘ ಹೆಮ್ಮರವಾಗಿ ಬೆಳೆಯಬೇಕು

### ಕೋಳೂರ ಎಲ್ ಟಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ 59 ನೇ ವಾರ್ಷಿಕ ಮಹಾಸಭೆ

**ಮುದ್ದೇಬಿಹಾಳ :** ಸಂಘದಲ್ಲಿರುವ ರೈತರೆಲ್ಲರೂ ನಮ್ಮವರು ನಾನು ನಿಮ್ಮವನು ನಮ್ಮ ಸಹಕಾರಿ ಸಂಘ ಹೆಮ್ಮರವಾಗಿ ಬೆಳೆಯಬೇಕು ಎಂದು ಚಿದಾನಂದ ಸೀತಿಮನಿ ಹೇಳಿದರು.

ತಾಲ್ಲೂಕಿನ ಕೋಳೂರ ಎಲ್ ಟಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ 59 ನೇ ವಾರ್ಷಿಕ ಮಹಾಸಭೆ ಉದ್ದೇಶಿಸಿ ಮಾತನಾಡಿದರು ಇಲ್ಲಿಯವರೆಗೆ ಸ್ವಂತ ಕಟ್ಟಡ ಇರಲಿಲ್ಲ ಸದ್ಯ ನೂತನ ಕಟ್ಟಡ ಮುಂದಿನ ತಿಂಗಳು ಲೋಕಾರ್ಪಣೆಗೊಳ್ಳಲಿದೆ ಸರಕಾರದಿಂದ ಸಿಗುವಂತಹ ಎಲ್ಲಾ ಸೌಲಭ್ಯ ಒದಗಿಸುವ ಪ್ರಯತ್ನ ಮಾಡುತ್ತೇನೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ರವಿ ನಾಯಕ ಸಂಘದ ಎಲ್ಲಾ ಸದಸ್ಯರ ಸಲಹೆ ಮಾರ್ಗದರ್ಶನದಿಂದ ಅಧ್ಯಕ್ಷರು ಸಂಘವನ್ನು ಮುನ್ನಡೆಸುತ್ತಿದ್ದಾರೆ ಸಂಘದ ಏಳ್ಗೆಗೆ ಹಗಲಿರುಳು ಶ್ರಮಿಸಿದ ಫಲವಾಗಿ ಇಂದು ಸಂಘದ ನೂತನ ಭವ್ಯ ಕಟ್ಟಡ ತಲೆ ಎತ್ತಿ ನಿಂತಿದೆ ಎಂದರು.

ಈ ವೇಳೆ ತಾಲೂಕು ರೈತ ಸಂಘದ ಅಧ್ಯಕ್ಷ ಅಯ್ಯಪ್ಪ ಬಿದರಕುಂದಿ ಮಾತನಾಡಿದರು.



ವಾರ್ಷಿಕ ಅಡಾವೆ ಪತ್ರಿಕೆಯನ್ನು ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಾಹಕ ಸಂಗಯ್ಯ ಹೊನ್ನಳ್ಳಿ ಅವರು ಓದಿ ಮಾತನಾಡಿ, ಪ್ರಸಕ್ತ ವರ್ಷ ಸಂಘದಲ್ಲಿ 10 ಲಕ್ಷ 33 ಸಾವಿರ ರೂ ನಿವ್ವಳ ಲಾಭಗಳಿಸಿದೆ ಎಂದರು.

ಸಭೆಯಲ್ಲಿ ಬ್ಯಾಂಕ್ ನ ಉಪಾಧ್ಯಕ್ಷ ಯಲಗೂರದಪ್ಪ ಝಳಕಿ, ನಿರ್ದೇಶಕರುಗಳಾದ ಅಯ್ಯಪ್ಪ ಬಿದರಕುಂದಿ, ಚನ್ನಬಸಪ್ಪ ಕೋಳೂರ,ಭೀಮಪ್ಪ ವಾಲಿಕಾರ,ಮಲ್ಲಮ್ಮ ಹಳ್ಳೂರ,ಶ್ರೀಮತಿ ಚನ್ನವ್ವ ಬೈಯ್ಯಾಪೂರ ,ಮಲ್ಲಪ್ಪ ತಾರನಾಳ,ರೀತಿಬಾಯಿ ಲಮಾಣಿ, ಗುರುಬಾಯಿ ಜಾಧವ, ಕೋಬಾನಾಯಕ ಧರ್ಮಗಿ-ರಿ,ಶೇರುದಾರರಾದ ಕೆ ಎನ್ ಬಿದರಕುಂದಿ, ಗುರುಬಸಪ್ಪ ಬಸರಕೋಡ, ರಾಮನಗೌಡ ಬಿರಾದಾರ, ರಾಯನಗೌಡ ಬಿರಾದಾರ, ಸಂಗಪ್ಪ ಢವಳಗಿ, ಲಕ್ಷ್ಮಣ ಢವಳಗಿ, ರೇವಣಪ್ಪ ಹರನಾಳ, ಈರಪ್ಪ ಢವಳಗಿ, ಶರಣಪ್ಪ ಕತ್ತಿ, ಅಮರಪ್ಪ ನಿಡಗುಂದಿ, ಶೇಖಪ್ಪಕತ್ತಿ, ಬಸಪ್ಪ ಇಂಗಳಗಿ, ಸಂಗಪ್ಪ ಹಾದಿಮನಿ, ಬಸಲಿಂಗಪ್ಪ ಬಿದರಕುಂದಿ, ಸಿಬ್ಬಂದಿ ಮಲ್ಲಿಕಾರ್ಜುನ ಬಿರಾದಾರ ಸೇರಿದಂತೆ ಕೋಳೂರ, ನೇಬಗೇರಿ, ಬನೋಶಿ, ಗೋನಾಳ ಎಸ್ ಹೆಚ್, ದೇವೂರ ಗ್ರಾಮದ ಶೇರುದಾರರು ಸೇ-ರಿದಂತೆ ಉಪಸ್ಥಿತರಿದ್ದರು.

## ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಹಮಾಲರ ಪ್ರತಿಭಟನೆ

**ರಬಕವಿ-ಬನಹಟ್ಟಿ :** ಅಸಂಘಟಿತ ಕಾರ್ಮಿಕರಲ್ಲಿಯೇ ಅತ್ಯಂತ ಶ್ರಮದಾಯಕ ಕೆಲಸ ನಿರ್ವಹಿಸುವ ಶ್ರಮ ಜೀವಿಗಳೆಂದರೆ ಹಮಾಲರು. ನಮಗೆ ಯಾವುದೇ ಸೌಲಭ್ಯ ಗಳಿಲ್ಲದ ಕಾರಣ ಪ್ರತಿಭಟನೆ ಅನಿವಾರ್ಯವಾಗಿದೆ ಎಂದು ರಬಕವಿ ಬನಹಟ್ಟಿ ಕಾಡಸಿದ್ಧೇಶ್ವರ ಶ್ರಮಿಕ ಸಮುದಾಯದ ಹಮಾಲಿ ಕಾರ್ಮಿಕ ಸಂಘದ ಗೌರವಾಧ್ಯಕ್ಷ ಬಸಯ್ಯ ವಸ್ತ್ರದ ಹೇಳಿದರು.

ಸೋಮವಾರ ರಬಕವಿ ಬನಹಟ್ಟಿ ಕಾಡಸಿದ್ಧೇಶ್ವರ ಹಮಾಲ ಕಾರ್ಮಿಕ ಸಂಘದ ಅಡಿಯಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ನಂತರ ತಾಲೂಕು ಕೇಂದ್ರ ಕಚೇರಿಯಲ್ಲಿ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು. ರಾಜ್ಯ ಸರ್ಕಾರ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಅಂಬೇಡ್ಕರ್ ಸಹಾಯ ಹಸ್ತ ಸ್ಮಾರ್ಟ್ ಕಾರ್ಡ್ ಪಡೆದ ಹಮಾಲಿ ಕಾರ್ಮಿಕರು



ಸೇರಿದಂತೆ 23 ವಲಯ ಅಸಂಘಟಿತ ಕಾರ್ಮಿಕ ವಲಯದ ಕಾರ್ಮಿಕರಿಗೆ ಅಪಘಾತ, ಮರಣ, ಅಂಗವಿಕಲತೆ, ಅಪಘಾತ ವೈದ್ಯಕೀಯ ಮರು ಪಾವತಿ, ಶವಸಂಸ್ಕಾರ ಪರಿಹಾರ ಸೇರಿದಂತೆ ಇನ್ನೂ ಅನೇಕ ಸೌಲಭ್ಯಗಳನ್ನು ಸರ್ಕಾರ ಘೋಷಿಸಿರುವುದು ಸ್ವಾಗತಾರ್ಹವಾಗಿದೆ ಎಂದರು.

ನಂತರ ರಬಕವಿ ಬನಹಟ್ಟಿ ಹಮಾಲರ ಸಂಘದ ಅಧ್ಯಕ್ಷ ಮಾಳು ಕರಿಗಾರ ಮಾತನಾಡಿ, ಸಹಜ ಮರಣಕ್ಕೆ ರೂ. ಒಂದು ಲಕ್ಷ, ಮತ್ತು ಶವಸಂಸ್ಕಾರಕ್ಕೆ ರೂ. 25 ಸಾವಿರಕ್ಕೆ ಹೆಚ್ಚಿಸುವುದು. ಹಮಾಲಿ ಕಾರ್ಮಿಕರು ಸೇರಿದಂತೆ ಅಸಂಘಟಿತ ಕಾರ್ಮಿಕರಿಗೆ ಕರ್ನಾಟಕ ಅಸಂಘಟಿತ ಕಾರ್ಮಿಕರ ಭವಿಷ್ಯನಿಧಿ ಯೋಜನೆ ( ಪಶ್ಚಿಮ ಬಂಗಾಳ ಮಾದರಿ) ಜಾರಿ ಮಾಡಬೇಕು ಹಾಗೂ ಸೂಕ್ತ ಪಿಂಚಣಿ ಯೋಜನೆ ಜಾರಿ ಮಾಡಬೇಕು. ಹೀಗೆ ಹತ್ತು ಹಲವು ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು ಎಂದು ಒತ್ತಾಯಿಸಿದರು. ತಹಶೀಲ್ದಾರ್ ಗಿರೀಶ ಸ್ವಾದಿ ಅವರು ಮನವಿ ಸ್ವೀಕರಿಸಿ ಜಿಲ್ಲಾಧಿಕಾರಿಗಳ ಮುಖಾಂತರ ಸಂಬಂಧಿಸಿದ ಇಲಾಖೆ ಸಚಿವರಿಗೆ ತಲುಪಿಸುವ ವ್ಯವಸ್ಥೆ ಮಾಡುತ್ತೇನೆ ಎಂದರು.

ಪ್ರತಿಭಟನೆಯಲ್ಲಿ ಹಮಾಲರಾದ ಸದಾಶಿವ ಹನಗಂಡಿ, ಕರೆಪ್ಪ ಆಲಕನೂರ, ಸದಾಶಿವ ಆಲಕನೂರ, ಮೂಪು ಬುರುಡ, ಕರೆಪ್ಪ ಸಂತಿ, ಭೀರಪ್ಪ ಆಲಕನೂರ, ರಾಜು ಬುರುಡ, ಭೀಮಪ್ಪ ಮಹೇಶವಾಡಗಿ, ಪ್ರಶಾಂತ ದಳವಾಯಿ, ಲಕ್ಷ್ಮಣ ಗಡದಿ, ಚಂದ್ರು ಕರಡಿ, ಸಿದ್ದಪ್ಪ ಆಲಕನೂರ, ಭೀರಪ್ಪ ಭೂಜುಂಗ, ಸಿಂಧೂರ ಬಂಗೇನವರ, ಮಲ್ಲಪ್ಪ ವನ್ನೂರ, ರಾಜು ಸೌದಾಗರ, ಅಮೀರ ಸೌದಾಗರ, ಹಣಮಂತ ಕುಡಚಿ, ಪಂಡಿತ ಕುಳ್ಳೊಳ್ಳಿ, ಮಳೆಪ್ಪ ತಳವಾರ, ವಿಠ್ಠಲ ಮುಸೋಡಗಿ, ಗೂಳಪ್ಪ ಹುಲ್ಯಾಳ, ಭಾಷಾ ಮಂಟೂರ, ರಾಜು ಚಿಲಮಿ, ರಾಮ ಮುಸೋಡಗಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಗ್ರಾಮ ಆಡಳಿತಾಧಿಕಾರಿಗಳ ನಿರ್ಧಾರ



**ರಬಕವಿ-ಬನಹಟ್ಟಿ :** ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಕೇಂದ್ರ ಸಂಘ ಮತ್ತು ತಾಲೂಕು ಘಟಕ ರಬಕವಿ-ಬನಹಟ್ಟಿ ರಾಜ್ಯ ಕಾರ್ಯಕಾರಿಣಿಯ ನಿರ್ಣಯದಂತೆ ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದಿ.26ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವ ಬಗ್ಗೆ ತಹಶೀಲ್ದಾರ ಗಿರೀಶ ಸ್ವಾದಿಯವರಿಗೆ ತಾಲೂಕಿನ ಎಲ್ಲ ಗ್ರಾಮ ಆಡಳಿತಾಧಿಕಾರಿಗಳು ಮನವಿ ಸಲ್ಲಿಸಿದರು.

ಮೊಬೈಲ್ ಆಪ್ ಸಮಸ್ಯೆಗಳ ಬಗ್ಗೆ, ಅಂತರ್ ಜಿಲ್ಲಾ ವರ್ಗಾವಣೆ, ಪ್ರಯಾಣ ಭತ್ಯೆದರ, ಸೇವಾ ಭದ್ರತೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದಿ.23ರಿಂದ ಮೊಬೈಲ್ ಆಪ್ ಮತ್ತು ವೆಬ್ ಅಪ್ಲಿಕೇಶನ್ ಸ್ಥಗಿತಗೊಳಿಸಿದ್ದು, ಬರುವ ದಿ.26ರಿಂದ ಲೇಖನಿ ಸ್ಥಗಿತಗೊಳಿಸುವ ಮೂಲಕ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುತ್ತದೆಂದು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಿರಸ್ತೇದಾರ ಆರ್.ಎಸ್.ಸಾತಿಹಾಳ, ಗ್ರಾಮ ಆಡಳಿತಾಧಿಕಾರಿಗಳ ಸಂಗ ಬಾಗಲಕೋಟ ಜಿಲ್ಲೆ ಅಧ್ಯಕ್ಷ ಮಲ್ಲು ಕವಟಗೊಪ್ಪ, ತಾಲೂಕಾಧ್ಯಕ್ಷ ರಾಚಯ್ಯ ಮಠಪತಿ, ಗೌರವಾಧ್ಯಕ್ಷ ಸದಾಶಿವ ಕುಂಬಾರ, ಉಪಾಧ್ಯಕ್ಷ ಎಂ.ಐ.ಜಮಖಂಡಿ, ಪ್ರಧಾನ ಕಾರ್ಯದರ್ಶಿಗಳು ಬಸವರಾಜ ಗುಂಡಿ, ರೇವಣಸಿದ್ದ ಕಾಮಟೆ, ಆಮಸಿದ್ದ ಬಿರಾದಾರ, ರವಿ ಈಟಿ, ಸೌರಭ ಮೇತ್ರಿ, ಮಂಜು ನೀಲನ್ನವರ, ಸಿ.ಎನ್.ಹೊಸಮನಿ, ತ್ರಿವೇಣಿ ದೇವರಮನಿ, ಸಂಗೀತಾ ವಾಲಿಕಾರ, ದೀಪಾ ಮೇತ್ರಿ, ಪೂಜಾ ಜಿಟ್ಟಿ, ಶಬಾನಾ ಜಮಾದಾರ ಹಾಗೂ ಸರ್ವ ಸದಸ್ಯರು ಉಪಸ್ಥಿತರಿದ್ದರು.

### ಪೌರ ಕಾರ್ಮಿಕ ದಿನಾಚರಣೆ

## ಪೌರಕಾರ್ಮಿಕರ ಸೇವೆ ಅವಿಸ್ಮರಣೀಯ: ಸ್ವಪ್ನಾ ಅನಿಗೋಳ

**ಮಹಾಲಿಂಗಪುರ :** ಪಟ್ಟಣದ ಸ್ವಚ್ಛತೆಗಾಗಿ ನಿತ್ಯ ಶ್ರಮವಹಿಸಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರ ಸೇವೆ ಅವಿಸ್ಮರಣಿಯ. ನಮ್ಮ ಆರೋಗ್ಯ ರಕ್ಷಣೆ ಮಾಡುತ್ತಿರುವ ಪೌರಕಾರ್ಮಿಕರ ಕುರಿತು ಗೌರವ ಮತ್ತು ಭಕ್ತಿ ಇರಲಿ ಎಂದು ಪುರಸಭೆಯ ಸ್ವಚ್ಛ ಭಾರತ ಮಿಷನ್ ಯೋಜನೆಯ ರಾಯಭಾರಿ, ಶಿಕ್ಷಕಿ ಸ್ವಪ್ನಾ ಅನಿಗೋಳ ಹೇಳಿದರು.

ಪುರಸಭೆ ಆವರಣದಲ್ಲಿ ಜರುಗಿದ ಪೌರಕಾರ್ಮಿಕ ದಿನಾಚರಣೆ-2024 ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಕಾಯಕದಲ್ಲಿ ಯಾವುದು ಮೇಲು ಕೀಳುಗಳಿಲ್ಲ. ಕಾಯಕವೇ ಶ್ರೇಷ್ಠ. ಯಾರು ಏನೇ ಅನ್ನಲಿ, ನಿಮಗೆ ನಿಮ್ಮ ಕೆಲಸದ ಬಗ್ಗೆ ಆತ್ಮತೃಪ್ತಿ ಇರಲಿ. ಪಟ್ಟಣದ ಆರೋಗ್ಯದ ಜೊತೆಗೆ ನಿಮ್ಮ ಆರೋಗ್ಯದ ಕಾಳಜಿಯು ಮುಖ್ಯ. ಸಾರ್ವಜನಿಕರು ಸಹ ಪೌರ ಕಾರ್ಮಿಕರನ್ನು ಕಸದವರು ಅನ್ನುವ ಬದಲು ಪುರಸಭೆಯ ಸ್ವಚ್ಛತಾ ಕಾರ್ಮಿಕರು ಎಂಬ ಗೌರವ ನೀಡಬೇಕು ಎಂದರು.

ಇನ್ನೋರ್ವ ಅತಿಥಿ ಉಪನ್ಯಾಸಕ ಶಿವಲಿಂಗ ಸಿದ್ನಾಳ ಮಾತನಾಡಿ ಪೌರ ಕಾರ್ಮಿಕರು ಸ್ವಚ್ಛತೆ ರಾಯಭಾರಿಗಳಾಗಿದ್ದು, ಪೌರಕಾರ್ಮಿಕ ಕೆಲಸವು ಪುಣ್ಯದ ಕೆಲಸವಾಗಿದೆ. ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಕಸದೊಂದಿಗೆ ಆರಂಭವಾದ ನಿಮ್ಮ ಜೀವನ ನಿಮ್ಮ ಮಕ್ಕಳು ಪುರಸಭೆಯಲ್ಲಿ ಉನ್ನತ ಹುದ್ದೆಯ ಅಲಂಕರಿಸುವ ಮೂಲಕ ನಿಮ್ಮ ಬದುಕು ಖುಷಿಯ ರಸದೊಂದಿಗೆ ಬದಲಾಗಲಿ ಎಂದರು.




ಪೌರಕಾರ್ಮಿಕರನ್ನು ಪುರಸಭೆಯಿಂದ ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಪೌರ ಕಾರ್ಮಿಕರಿಗಾಗಿ ಹಮ್ಮಿಕೊಂಡ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಅಧ್ಯಕ್ಷತೆವಹಿಸಿದ್ದ ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಅವರು ಗಾಂಧಿಜಿ-ಅಂಬೇಡ್ಕರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಪೌರ ಕಾರ್ಮಿಕ ಸಂಘದ ಅಧ್ಯಕ್ಷ ಎಂ.ಕೆ. ದಳವಾಯಿ, ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ, ಉಪಾಧ್ಯಕ್ಷೆ ಶೀಲಾ ಭಾವಿಕಟ್ಟಿ, ಸದಸ್ಯರಾದ ಬಲವಂತಗೌಡ ಪಾಟೀಲ, ಮುಸ್ತಾಕ ಚಿಕ್ಕೋಡಿ, ಸವಿತಾ ಹುರಕಡ್ಲಿ, ಚಾಂದನಿ ನಾಯಕ, ಸುಜಾತಾ ಮಾಂಗ, ಕಚೇರಿ ವ್ಯವಸ್ಥಾಪಕ ಎಸ್.ಎನ್.ಪಾಟೀಲ, ಹಿರಿಯ ಆರೋಗ್ಯ ನಿರೀಕ್ಷಕ ಮಹಾಲಿಂಗ ಮೂಗಳಖೋಡ, ಕಿರಿಯ ಆರೋಗ್ಯ ನಿರೀಕ್ಷಕರಾದ ರಾಜು ಹೂಗಾರ, ಸಿದ್ದು ಅಳ್ಳಿಮಟ್ಟಿ, ಕಂದಾಯ ಅಧಿಕಾರಿ ಪಿ.ವೈ.ಸೊನ್ನದ, ರಾಜೇಶ್ವರಿ ಸೋರಗಾಂವಿ, ಚನ್ನಮ್ಮ ಪಟ್ಟಣಶೆಟ್ಟಿ, ಪ್ರೀತಿ ಹುಲಕುಂದ, ಮಂಜುಳಾ ಬಂಡಿವಡ್ಡರ, ರಾಮು ಮಾಂಗ, ಲಕ್ಷ್ಮೀ ಪರೀಟ, ಮಹಾಲಿಂಗ ಮಾಂಗ ಸೇರಿದಂತೆ ಹಲವರು ಇದ್ದರು.

ಎಸ್.ಎಂ.ಪಾಟೀಲ ಸ್ವಾಗತಿಸಿದರು. ಎಂ.ಡಿ.ಮಹಾಲಿಂಗ ಪ್ರಾರ್ಥಿಸಿದರು. ರವಿ ಹಲಸಪ್ಪಗೋಳ ನಿರೂಪಿಸಿದರು. ಮಹಾಲಿಂಗ ಗಸ್ತಿ ವಂದಿಸಿದರು.

## ಗುರುವಂದನಾ ಕಾರ್ಯಕ್ರಮ: ಕಲಾವಿದರಿಗೆ ಸನ್ಮಾನ



**ಬೆಳಗಾವಿ :** ಸ್ವರಸಾಧನಾ ಸಂಗೀತ ಮಹಾವಿದ್ಯಾಲಯದ ವತಿಯಿಂದ ಬೆಳಗಾವಿಯ ಸರಸ್ವತಿ ವಾಚನಾಲಯದಲ್ಲಿ ಭಾನುವಾರ ಪಂಡಿತ ಪಲುಸ್ಕರ್ ಅವರ ಪುಣ್ಯಸ್ಮರಣೆ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಬೆಳಗಾವಿಯ ವಿವಿಧ ಕಲಾವಿದರಿಗೆ ಸನ್ಮಾನ ಮಾಡಲಾಯಿತು. ಅಲಂಕಾರ ಹಾಗೂ ವಿಷಾರದಾ ಪದವಿಯಲ್ಲಿ ಸಾಧನೆ ಮಾಡಿದ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕವಾಗಿ ಅಭಿನಂದಿಸಲಾಯಿತು. ಸ್ವರಸಾಧನಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಶಾಸ್ತ್ರೀಯ ಗಾಯನ ಹಾಗೂ ಸುಗಮ ಸಂಗೀತವನ್ನು ಪ್ರಸ್ತುತಪಡಿಸಿದರು.

ತಬಲಾ ಸಾಥೀದಾರರಾಗಿ ಜಿತೇಂದ್ರ ಸಾಬಣ್ಣವರ್, ನಿತಿನ್ ಸುತಾರ್ ಹಾಗೂ ಸಂಚಿತ ಪಾಟೀಲ ಮತ್ತು ಹಾರ್ಮೋನಿಯಂ ಸಾಥೀದಾರರಾಗಿ ಚೈತ್ರಾ ಅಧ್ಯಾಪಕ ಹಾಗೂ ಶೃತಿ ಪಾಟೀಲ ಕಾರ್ಯಕ್ರಮಕ್ಕೆ ಮೆರಗು ನೀಡಿದರು. ಸುನ ಪಾಟೀಲ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಅತಿಥಿ ಕಲಾವಿದರಾಗಿ ಮಾಧುರಿ ಮುತಾಲಿಕ್ ದೇಸಾಯಿ ಆಗಮಿಸಿ ತಮ್ಮ ಸುಶ್ರಾವ್ಯ ಗಾಯನ ಮತ್ತು ಭಕ್ತಿಗೀತೆಗಳಿಂದ ರಂಜಿಸಿದರು.

ಸೀತಾ ಬೈಲಕೇರಿ ಸ್ವಾಗತ ಭಾಷಣ ಮಾಡಿ, ಸಂಗೀತ ವಿದ್ಯಾಲಯದ ಕಿರು ಪರಿಚಯ ನೀಡಿ-ದರು. ರಾಜಶ್ರೀ ಖೋಪರ್ಡೇ ಪಂಡಿತ ಪಲುಸ್ಕರ್ ಅವರ ಜೀವನ ಸಾಧನೆಗಳನ್ನು ವಿವರಿಸಿದರು. ವಂದನಾ ಕುಲಕರ್ಣಿ ಅತಿಥಿ ಕಲಾವಿದರನ್ನು ಪರಿಚಯಿಸಿದರು. ಜಾನಕಿ ಘೋರ್ಪಡೆ ಬೆಳಗಾವಿಯ ಕಲಾವಿದರನ್ನು ಪರಿಚಯಿಸಿದರು. ಸವಿತಾ ಕಟ್ಟಿ ವಿದ್ಯಾಲಯದ ವಿಶಾರದ, ಅಲಂಕಾರ ವಿದ್ಯಾರ್ಥಿಗಳನ್ನು ಪರಿಚಯಿಸಿದರು. ಸೀಮಾ ಕುಲಕರ್ಣಿ ಗಾಯನ ಪ್ರಸ್ತುತಪಡಿಸಿ, ವಂದನಾರ್ಪಣೆ ಸಲ್ಲಿಸಿದರು.

## ಧಾರವಾಡ ನಗರದ ಸರಕಾರಿ ಪ್ರೌಢಶಾಲೆಗೆ ಜಿಲ್ಲಾಧಿಕಾರಿ ದಿಢೀರ ಭೇಟಿ:

# ವಿದ್ಯಾರ್ಥಿ, ಶಿಕ್ಷಕರ ಹಾಜರಾತಿ, ತರಗತಿ ಪರೀಶೀಲನೆ

**ಧಾರವಾಡ :** ಧಾರವಾಡ ನಗರದ ಆರ್.ಎನ್.ಶೆಟ್ಟಿ ಜಿಲ್ಲಾ ಕ್ರೀಡಾಂಗಣ ಹತ್ತಿರ ಇರುವ ಸರಕಾರಿ ಪ್ರೌಢಶಾಲೆಗೆ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ದಿಢೀರ ಭೇಟಿ ನೀಡಿ, ಮಿಷನ್ ವಿದ್ಯಾಕಾಶಿ ಕಾರ್ಯಕ್ರಮಗಳನ್ನು ಪರೀಶೀಲಿಸಿದರು.

ಶಾಲೆಯ ಹತ್ತನೆ ತರಗತಿ ಮಕ್ಕಳ ಹಾಜರಾತಿಯಲ್ಲಿ 40 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗೈರು ಹಾಜರಿರುವದನ್ನು ಗಮನಿಸಿದ ಜಿಲ್ಲಾಧಿಕಾರಿಗಳು, ಪ್ರತಿ ವಿದ್ಯಾರ್ಥಿಯ ಗೈರು ಇರುವ ಬಗ್ಗೆ ಮಾಹಿತಿ ಪಡೆದರು. ಶಿಕ್ಷಕರ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅವರು ಮುಂದಿನ ಒಂದು ವಾರದಲ್ಲಿ ನಿರಂತರ ಗೈರಾಗಿರುವ 20 ಮಕ್ಕಳ ಮನೆ ಭೇಟಿ ನೀಡಿ, ಈ ಬಗ್ಗೆ ನಿಖರ ವರದಿ ನೀಡಬೇಕೆಂದು ಸೂಚಿಸಿದರು.

**ಕಲಿಕೆಯ ಗುಣಮಟ್ಟ:** ಶಾಲಾ ಸಾಕ್ಷರತಾ ಇಲಾಖೆಯಿಂದ ಈಗಾಗಲೇ ಈ ವರ್ಷದ ಆರಂಭದಲ್ಲಿ ಗುರುತಿಸಿರುವ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪ್ರತ್ಯೇಕ ತರಗತಿಗಳನ್ನು ನಡೆಸುವ ಮೂಲಕ ಅವರ ಓದು,ಬರಹದಲ್ಲಿ ಸುಧಾರಣೆ ತರಲಾಗುತ್ತಿದೆ.

ಇಂತಹ ತರಗತಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಹತ್ತನೆಯ ತರಗತಿಯ ವಿದ್ಯಾರ್ಥಿಗಳಿಂದ ಕನ್ನಡ, ಇಂಗ್ಲೀಷ ಭಾಷೆಯ ಪಠ್ಯಗಳನ್ನು ಓದಿಸುವ ಮೂಲಕ ವಿದ್ಯಾರ್ಥಿಗಳಲ್ಲಿನ ಬದಲಾವಣೆ, ಪ್ರಗತಿ ಪರೀಶೀಲಿಸಿದರು.



ಸ್ವಯಂ ಪ್ರೇರಣೆಯಿಂದ ಪಾಠ ಓದಿದ ಮಕ್ಕಳಿಗೆ ಶಬ್ಬಾಶ ಹೇಳುವ ಮೂಲಕ ಇಡೀ ವರ್ಗದ ವಿದ್ಯಾರ್ಥಿಗಳಿಂದ ಚಪ್ಪಾಳೆ ತಟ್ಟಿಸಿ, ಪ್ರೋತ್ಸಾಹಿಸಿದರು.

**ಸೆ.26 ರಂದು ಪ್ರತಿ ಪ್ರೌಢಶಾಲೆಯಲ್ಲಿ ಪಾಲಕರ ಸಭೆ:** ಜಿಲ್ಲೆಯ ಪ್ರತಿ ಪ್ರೌಢಶಾಲೆಯ ಹಾಜರಾತಿ ಪರೀಶೀಲಿಸಿದಾಗ ಸರಿಸುಮಾರು ಎರಡು ಸಾವಿರಕ್ಕೂ ಅಧಿಕ ಮಕ್ಕಳು ಅನಿಯಮಿತ ಗೈರು, ನಿರಂತರ ಗೈರುಹಾಜರು ಇರುವುದು ತಿಳಿದು ಬಂದಿದೆ. ಇದನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದ್ದು, ಜಿಲ್ಲೆಯ ಪ್ರತಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರು, ತಮ್ಮ ಶಾಲೆಯಲ್ಲಿ ಅನಿಯಮಿತ ಮತ್ತು ನಿರಂತರ ಗೈರು ಇರುವ ವಿದ್ಯಾರ್ಥಿಗಳ ಪಾಲಕರ ಸಭೆಯನ್ನು ಬರುವ ಸೆಪ್ಟೆಂಬರ್ 26 ರ ಶನಿವಾರದಂದು ಮಧ್ಯಾಹ್ನ ಶಾಲೆಯಲ್ಲಿ ಜರುಗಿಸಬೇಕೆಂದು ಜಿಲ್ಲಾಧಿಕಾರಿಗಳು ನಿರ್ದೇಶಿಸಿದರು. ಈ ಸಭೆಗೆ ಆಯಾ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ಮತ್ತು ಸದಸ್ಯರನ್ನು, ಜನಪ್ರತಿನಿಧಿಗಳನ್ನು ಆಹ್ವಾನಿಸಿ, ಅವರಿಗೂ ಮಕ್ಕಳ ಗೈರುಹಾಜರಿ ಬಗ್ಗೆ ಮಾಹಿತಿ ನೀಡಬೇಕೆಂದು ಅವರು ತಿಳಿಸಿದರು. ಪ್ರತಿ ಪ್ರೌಢಶಾಲಾ ಮುಖ್ಯ ಶಿಕ್ಷಕರಿಂದ ಗೈರುಹಾಜರು ಇರುವ ಮಕ್ಕಳ ಬಗ್ಗೆ ಸಕಾರಣದೊಂದಿಗೆ ವಿವರವಾದ ವರದಿಯನ್ನು ಡಿಡಿಪಿಐ ಅವರು ಪಡೆದು, ಜಿಲ್ಲಾಡಳಿತಕ್ಕೆ ಕ್ರೋಡಿಕೃತ ವರದಿ ಸಲ್ಲಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

**ಗ್ರಾಮಮಟ್ಟದ ಅಧಿಕಾರಿಗಳ ತಂಡ ರಚಿಸಿ:** ಶಾಲೆಯಿಂದ ಹೊರಗುಳಿದ ಮತ್ತು ನಿರಂತರ ಗೈರು ಇರುವ ಮಕ್ಕಳ ಮನೆಮನೆಗೆ ಭೇಟಿ, ಪಾಲಕರಿಗೆ ತಿಳುವಳಿಕೆ ಮತ್ತು ಮಕ್ಕಳನ್ನು ಶಾಲೆಗೆ ಪ್ರತಿದಿನ ಬರುವಂತೆ ಮಾಡಲು ಪಿಡಿಓ, ವ್ಹಿ.ಎ., ಎಸ್.ಡಿ.ಎಂ.ಸಿ., ಆಯಾ ವಾರ್ಡ, ಗ್ರಾಮಗಳ ಪಂಚಾಯತ ಸದಸ್ಯರು ಸಮಿತಿ ಮಾಡಿಕೊಳ್ಳಬೇಕು. ಈ ಕುರಿತು ಸೂಕ್ತ ಕ್ರಮವಹಿಸುವಂತೆ ಶಾಲಾ ಶಿಕ್ಷಣ ಇಲಾಖೆಯ ಡಿಡಿಪಿಐ ಅವರಿಗೆ ತಿಳಿಸಿದರು.

**ಶಾಲಾ ಶೇ.75 ರಷ್ಟು ಹಾಜರಾತಿ ಕಡ್ಡಾಯ:** ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ಪರೀಕ್ಷೆಗೆ ಶೇ.75 ರಷ್ಟು ಕಡ್ಡಾಯ. ಅದನ್ನು ಪ್ರತಿ ಶಾಲೆಯಲ್ಲಿ ತಪ್ಪದೇ ಅನುಸರಿಸಬೇಕು. ಅನಿಯಮಿತ ಮತ್ತು ನಿರಂತರ ಗೈರು ಹಾಜರಿರುವ ಮಕ್ಕಳ ಪಾಲಕರಿಗೆ ಸಭೆ ಕರೆದು ಈ ಕುರಿತು ತಿಳುವಳಿಕೆ ನೀಡಬೇಕು. ಪಾಲಕರಿಗೆ ಧೃಡಿಕರಿಸಬೇಕು ಎಂದು ಅವರು ಹೇಳಿದರು.

**ಪ್ರತಿ ತಾಲೂಕಿನ ಪ್ರೌಢಶಾಲೆಗೆ ಅನೀರೀಕ್ಷಿತ ಭೇಟಿ:** ಮಿಷನ್ ವಿದ್ಯಾಕಾಶಿ ಯೋಜನೆಯ ಯಶಸ್ವಿಗೆ ಪ್ರತಿಯೊಬ್ಬರು ಶ್ರಮಿಸಬೇಕು. ತಾವು ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಪ್ರತಿ ತಿಂಗಳು ಪ್ರತಿ ಶಾಲೆಗೆ ಭೇಟಿ ನೀಡಿ, ಮಕ್ಕಳ ಕಲಿಕೆಗೆ ಹಾಗೂ ಶಿಕ್ಷಕರಿಗೆ ಸಹಕಾರ ನೀಡಲಿದ್ದಾರೆ. ಶಾಲೆಯ ಪ್ರಗತಿ ಕುರಿತು ಜಿಲ್ಲಾಡಳಿತಕ್ಕೆ ವರದಿ ನೀಡಲಿದ್ದಾರೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಎಸ್.ಕೆಳದಿಮಠ, ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಸಿಂದಗಿ, ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಶ್ರೀದೇವಿ ಲದ್ದಿಮಠ ಸೇರಿದಂತೆ ಶಾಲೆಯ ಸಹ ಶಿಕ್ಷಕರು, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಅಭಿಯಂತರರ ದಿನಾಚರಣೆ



**ಧಾರವಾಡ :** ಆಧುನಿಕ ತಂತ್ರಜ್ಞಾನವು ಇಂದಿನ ದಿನಗಳಲ್ಲಿ ಅಗತ್ಯವಾಗಿದ್ದು ಇದರಿಂದಾಗಿ ಹೊಸ ಹೊಸ ಬದಲಾವಣೆಯನ್ನು ಕಾಣುತ್ತಿದ್ದೇವೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕುಲಪತಿ ಡಾ. ವಿದ್ಯಾಶಂಕರ ಎಸ್. ಅವರು ಹೇಳಿದರು.

ಅವರು ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ) ಯಲ್ಲಿ ಆಯೋಜಿಸಲಾದ ಅಭಿಯಂತರರ ದಿನಾಚರಣೆಯನ್ನು ಉದ್ಘಾಟಿಸಿ, ಮಾತನಾಡಿದರು.

ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಹೊಸ ಆವಿಷ್ಕಾರಗಳು ಮತ್ತು ಸಂಶೋಧನೆಗಳ ಅವಶ್ಯಕತೆ ಇದೆ. ಇಂಥಹ ವಿನ್ಯಾಸಗಳು ಹವಾಮಾನ ಚಕ್ರ ಬದಲಾವಣೆಗೆ ಅನುಗುಣವಾದ ಸವಾಲುಗಳನ್ನು ಎದುರಿಸಲು ಸಹಕಾರಿಯಾಗುತ್ತವೆ. ಸುಸ್ಥಿರ ಬದುಕಿಗಾಗಿ ನೈಸರ್ಗಿಕ ಸಂಪನ್ಮೂಲಗಳಾದ ಕೃಷಿ ಭೂಮಿ, ಅರಣ್ಯ, ನೆಲ, ಜಲ, ಗಾಳಿ ಸಂರಕ್ಷಣೆ ಗಮನದಲ್ಲಿರಿಸಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವ ಅವಶ್ಯಕತೆ ಇದೆ ಎಂದು ಅವರು ತಿಳಿಸಿದರು. ವಾಲ್ಮಿ ಸಂಸ್ಥೆಯ ನಿರ್ದೇಶಕ ಡಾ. ರಾಜೇಂದ್ರ ಎನ್. ಪೋದ್ದಾರ ಅವರು ಮಾತನಾಡಿ ಇಂಜಿನಿಯರ್ಗಳು ವಿಷಯ ಪರಿಣಿತಿಯ ಜೊತೆಗೆ ಸಾಮಾಜಿಕ ಅಭಿಯಾಂತ್ರಿಕತೆಯನ್ನು ರೂಢಿಸಿಕೊಂಡಾಗ ಮಾತ್ರ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂದರು. ಈ ವರ್ಷದ ಅಭಿಯಂತರರ ದಿನಾಚರಣೆಯ ಘೋಷವಾಕ್ಯವಾದ ಸುಸ್ಥಿರತೆಯಲ್ಲಿ ಅಭಿಯಂತರರ ಪಾತ್ರ ಕುರಿತು ಮಾತನಾಡಿ ನಾವು ನಿರ್ಮಾಣ ಮಾಡುವ ಕಟ್ಟಡ, ಸಂರಚನೆಗಳು ಮತ್ತು ಸಮಾಜ ಸುಭದ್ರವಾಗಿರಬೇಕೆಂದರು. ಜೊತೆಗೆ, ಉತ್ತಮ ಜೀವನ ಶೈಲಿಯ ಮೂಲಕ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುವುದು ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಇಂಜಿನೀಯರ್ ಕನ್ನಯ್ಯ ನಾಯ್ಡು ಮಾತನಾಡಿದರು. ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರರು ವಿಮಲಾ ಕಾಳೆ, ಭಾರತೀಯ ಅಭಿಯಂತರರ ಸಂಸ್ಥೆಯ ಇಂಜಿನೀಯರ ವಿಜಯ ತೋಟಗೇರ, ಸಮಾಲೋಚಕ ಸಿವಿಲ್ ಅಭಿಯಂತರರ ಸಂಘದ ಅಧ್ಯಕ್ಷ ಸುನೀಲ ಬಾಗೇವಾಡಿ, ಸಮಾಲೋಚಕ ಸಿವಿಲ್ ಅಭಿಯಂತರರ ವೇದಿಕೆಯ ಅಧ್ಯಕ್ಷ ಸಂತೋಷ ಅಂ-ಚಟಗೇರಿ, ಲಕ್ಷ್ಮೇಶ್ವರ ತಾಂತ್ರಿಕ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರು ಡಾ. ಶಿವರಾಜಕುಮಾರ ಗೌಡರ, ಹೆಚ್.ಶಾಂತನಗೌಡ, ರೈತ ಪ್ರತಿನಿಧಿಗಳು, ತುಂಗಭದ್ರಾ ಯೋಜನೆ ಇವರನ್ನು ಸನ್ಮಾನಿಸಲಾಯಿತು.

ಪ್ರಾಧ್ಯಾಪಕ ಪ್ರೊ. ಬಿ.ವೈ. ಬಂಡಿವಡ್ಡರ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಸಹ ಪ್ರಾಧ್ಯಾಪಕ ಪ್ರದೀಪ ದೇವರಮನಿ ಕಾರ್ಯಕ್ರಮ ಸಂಯೋಜಿಸಿದರು. ಸಹಾಯಕ ಅಭಿಯಂತರ ಮಹದೇವಗೌಡ ಹುತ್ತನಗೌಡರ ಕಾರ್ಯಕ್ರಮ ನಿರೂಪಿಸಿದರು.

ತುಂಗಭದ್ರಾ ಯೋಜನೆ ಪ್ರದೇಶದ ರೈತರು, ಕಮಲಾ ಮತ್ತು ವೆಂಕಪ್ಪ ಎಮ್ ಅಗಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಲಕ್ಷ್ಮೇಶ್ವರ ವಿದ್ಯಾರ್ಥಿಗಳು, ಜಲ ಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗಳ ಅಭಿಯಂತರರು, ವಾಲ್ಮಿ ಸಂಸ್ಥೆಯ ಬೋಧಕ ಮತ್ತು ಬೋಧಕೇರ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಮಾದಕ ವಸ್ತು, ಮಾದಕ ದ್ರವ್ಯ ನಿಯಂತ್ರಣ ಸಮಿತಿ ಸಭೆ

**ಧಾರವಾಡ :** ಕಳೆದ ಕೆಲವು ದಿನಗಳಿಂದ ಡ್ರಗ್ಸ್ ತಪಾಸಣೆ ಕಾರ್ಯವನ್ನು ಪೊಲೀಸ್ ಇಲಾಖೆ ತೀವ್ರಗೊಳಿಸಿದ್ದು ಶ್ಲಾಘನೀಯ. ಆದರೆ ಡ್ರಗ್ಸ್ ಪಾಜಿಟಿವ್ ಬಂದಿರುವ ಪ್ರತಿ ಪ್ರಕರಣಗಳನ್ನು ಪಾಲೊಅಪ್ ಮಾಡಿ, ನಿಜವಾದ ಕಾರಣಕರ್ತರಿಗೆ ಶಿಕ್ಷೆ ಆಗುವಂತೆ ಮಾಡುವ ಮೂಲಕ, ಅವುಗಳನ್ನು ಮುಕ್ತಾಯಗೊಳಿಸಬೇಕು ಎಂದು ಸಮಿತಿ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ನಾರ್ಕೊ ಕೊ ಆರ್ಡಿನೇಶನ್ ಕಮಿಟಿ ಸಭೆ ಜರುಗಿಸಿ, ಡ್ರಗ್ಸ್ ನಿಯಂತ್ರಣ ಮತ್ತು ಜಾಗೃತಿ ಕಾರ್ಯಕ್ರಮಗಳ ಕುರಿತು ಪರಿಶೀಲಿಸಿ, ಮಾತನಾಡಿದರು.

ಅವಳಿ ನಗರದಲ್ಲಿ ಮಾದಕ ವಸ್ತು



ಮತ್ತು ಮಾದಕ ದ್ರವ್ಯ ಸೇವನೆ ಹಾಗೂ ಮಾರಾಟದ ಕುರಿತು ತಪಾಸಣೆ, ವಿಚಾರಣೆ ಕೈಗೊಂಡ ಬಗ್ಗೆ ಸಮಿತಿಗೆ ವರದಿ ಸಲ್ಲಿಸಬೇಕು.

354 ಯುವಕರ ಪೈಕಿ 168 ಜನ ವಿದ್ಯಾರ್ಥಿಗಳಲ್ಲಿ ಡ್ರಗ್ಸ್ ಸೇವನೆ ಪಾಜಿಟಿವ್ ಬಂದಿರುವುದು ಸಾಮಾನ್ಯ ಸಂಗತಿಯಲ್ಲ. ಡ್ರಗ್ಸ್ ಹಾನಿ ಕುರಿತು ಸಾರ್ವಜನಿಕರಲ್ಲಿ ವ್ಯಾಪಕ ಪ್ರಚಾರ ಮಾಡುವ ಅಗತ್ಯವಿದೆ ಎಂದು ಅವರು ತಿಳಿಸಿದರು.

ಶಾಲೆ, ಕಾಲೇಜು, ವಿವಿ ಕ್ಯಾಂಪಸ್‌ಗಳು ಡ್ರಗ್ಸ್ ಮುಕ್ತವಾಗಿರುವಂತೆ ಎಚ್ಚರಿಕೆ ವಹಿಸಬೇಕು. ವಿದ್ಯಾರ್ಥಿಗಳೊಂದಿಗೆ ಪಾಲಕರು, ಶಿಕ್ಷಕರಲ್ಲಿಯೂ ಮಾದಕ ವಸ್ತುಗಳ ಕುರಿತು ವ್ಯಾಪಕ ಪ್ರಚಾರದ ಮೂಲಕ ಜಾಗೃತಿ ಮೂಡಿಸಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಾಗೃತಿ ಕಾರ್ಯಕ್ರಮಗಳಲ್ಲಿ ಇತರ ಇಲಾಖೆಗಳ ಸಹಭಾಗಿತ್ವ ಪಡೆದು, ಉತ್ತಮವಾದ ವ್ಯವಸ್ಥಿತ ಅರಿವು ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಜಾರಿಗೊಳಿಸಲು ಪೊಲೀಸ್ ಇಲಾಖೆಯಿಂದ ಕ್ರಿಯಾಯೋಜನೆ ರೂಪಿಸಲು ಅವರು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ.,

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿ.ಬರಮನಿ, ಉಪಪೊಲೀಸ್ ಆಯುಕ್ತ ಮಹಾನಿಂಗ ನಂದಗಾವಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಕಾಲೇಜುಗಳ ಪ್ರಾಚಾರ್ಯರು, ವಿಶ್ವವಿದ್ಯಾಲಯಗಳ ವಿದ್ಯಾರ್ಥಿಕಲ್ಯಾಣ ಅಧಿಕಾರಿಗಳು ಮತ್ತು ಮಾದಕ ವಸ್ತು ಹಾಗೂ ಮಾದಕ ದ್ರವ್ಯಗಳ ನಿಯಂತ್ರಣ ತಜ್ಞರು ಭಾಗವಹಿಸಿದ್ದರು.

## ಎಂಬ್ರಾಯ್ಡರಿ ಉಚಿತ ತರಬೇತಿಗೆ ಅರ್ಜಿ ಆಹ್ವಾನ

**ಬೆಳಗಾವಿ :** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಎಂಬ್ರಾಯ್ಡರಿ, ಆರಿ ವರ್ಕ್ & ಫ್ಯಾಬ್ರಿಕ್ ಪೇಟಿಂಗ್ ಕುರಿತ 30 ದಿನಗಳ ಉಚಿತ ತರಬೇತಿಗಾಗಿ ಗ್ರಾಮೀಣ ನಿರುದ್ಯೋಗಿ ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

18 ರಿಂದ 45 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಅಭ್ಯರ್ಥಿಗಳು ಆಧಾರ್ ಕಾರ್ಡ್ ಹಾಗೂ ಬಿಪಿಎಲ್ ಕಾರ್ಡ್‌ನ್ನು ಹೊಂದಿರುವ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ತರಬೇತಿಯು ಕಡ್ಡಾಯವಾಗಿ ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು. ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.

ಆಸಕ್ತರು ತಮ್ಮ ಹೆಸರನ್ನು ಅಕ್ಟೋಬರ್ 08 ರೊಳಗಾಗಿ ನೊಂದಾಗಿಸಿಕೊಳ್ಳಬಹುದು. ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು ಅರಿಶಿನಕುಂಟೆಯ ರುಡ್‌ಸೆಟ್ ಸಂಸೆ ದೂರವಾಣಿ:9740982585, 9380162042 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಬೆಂಗಳೂರು ಶಾಖೆಯ ರುಡ್‌ಸೆಟ್ ಸಂಸ್ಥೆಯ ನಿರ್ದೇಶಕರಾದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಕ್ಷಕ ಕವಿಗಳು ಕೆನೆಪದರ ಶಿಕ್ಷಕರು: ಲೂತಿ

**ಜಮಖಂಡಿ :** ವರ್ಗದ ಕೊಠಡಿಯ ಜೊತೆಗೆ ಸಾಮಾಜಿಕ ಬಂಧುತ್ವ ಮತ್ತು ಪರಿಸರವನ್ನು ಪ್ರೀತಿಸುವ ಶಿಕ್ಷಕರಿಂದ ಮಾತ್ರ ಕಾವ್ಯದ ಭಾಷೆ ಹುಟ್ಟಲು ಸಾಧ್ಯ. ಶಿಕ್ಷಕ ಕವಿಗಳು ಕೆನೆಪದರ ಶಿಕ್ಷಕರು ಎನಿಸಿಕೊಳ್ಳುತ್ತಾರೆ ಎಂದು ಕ.ಸಾ.ಪ. ಬೀಳಗಿ ತಾಲ್ಲೂಕು ಘಟಕದ ಅಧ್ಯಕ್ಷ ಗುರುರಾಜ ಲೂತಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು, ಶ್ರೀ ವೀರೇಶ್ವರ ಪ್ರಕಾಶನ ಹಾಗೂ ಸಾಹಿತ್ಯ ಸೌರಭ ವೇದಿಕೆಯ ಆಶ್ರಯದಲ್ಲಿ ಇಲ್ಲಿನ ಕೋರ್ಟ್ ರಸ್ತೆಯ ಹೊಸಟ್ಟಿ ಕಟ್ಟಡದಲ್ಲಿ ಭಾನುವಾರ ನಡೆದ ಶಿಕ್ಷಕ ಸಾಹಿತಿಗಳ ಸಮ್ಮೇಳನದ ಅಂಗವಾಗಿ ಹೊರತಂದ ಕವನ ಸಂಕಲನ 'ಕಾವ್ಯಕೋಟೆ'ಯಲ್ಲಿ ಅತ್ಯುತ್ತಮ ಕವನ ರಚಿಸಿದ ಕವಿಗಳಿಗೆ 'ಕಾವ್ಯಕೋಟೆಯ ಮಿನುಗು ನಕ್ಷತ್ರಗಳು' ಪ್ರಶಸ್ತಿ ಪ್ರದಾನ ಮತ್ತು ಸತ್ಕಾರ ಸಮಾರಂಭದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಬದುಕನ್ನು ಪ್ರೀತಿಸುವವರಿಗೆ ಮಾತ್ರ ಕಾವ್ಯ ಕಟ್ಟುವ ಕಲೆ ಕರಗತ ಆಗುತ್ತದೆ. ಅನುಭವ ಮತ್ತು ಅನುಭಾವದ ಮೂಲಕ ಸುತ್ತಮುತ್ತಲಿನ ಪರಿಸರದ ಭಾಷೆಯಲ್ಲಿ ಕಾವ್ಯಗಳು ಹೊರಬರಬೇಕು. ಬದುಕಿನ





ಶೋಧನೆಯ ಕಡೆಗೆ ಕಾವ್ಯಗಳು ಸಾಗಬೇಕು. ಸಮಕಾಲೀನ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಕಾವ್ಯಗಳು ಬರಬೇಕು ಎಂದರು.

ನಿವೃತ್ತ ಪ್ರಾಚಾರ್ಯ, ಕಾರ್ಯಕ್ರಮದ ಪ್ರಾಯೋಜಕ ಡಾ.ಸಂಗಮೇಶ ಮಟೋಳಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಲೋಕದ ವೈಚಿತ್ರ್ಯಗಳನ್ನು ತೆರೆದ ಕಣ್ಣುಗಳಿಂದ ನೋಡುವ ಮನಸ್ಸು ಹಾಗೂ ಚಿಂತನಾ ಕೌಶಲ ಇರುವವರಲ್ಲಿ ಮಾತ್ರ ಪ್ರತಿಭೆ ಅರಳುತ್ತದೆ ಮತ್ತು ಕಾವ್ಯ ರಚನಾ ಕೌಶಲ ಕರಗತವಾಗುತ್ತದೆ. ಶಿಕ್ಷಕ ವೃತ್ತಿಯಲ್ಲಿ ಇದ್ದುಕೊಂಡು ಬರೆಯುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದರು.

ಸರ್ಕಾರಿ ಪಿ.ಬಿ.ಪ.ಪೂ ಕಾಲೇಜಿನ ಉಪನ್ಯಾಸಕ ಡಾ.ಲಿಂಗಾನಂದ ಗವಿಮಠ ಅತಿಥಿಗಳಾಗಿ ಮಾತನಾಡಿದರು. ಕ.ಸಾ.ಪ. ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಒಟ್ಟು 28 ಜನ ಶಿಕ್ಷಕ ಕವಿಗಳಿಗೆ 'ಕಾವ್ಯಕೋಟೆಯ ಮಿನುಗು ನಕ್ಷತ್ರ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪುರಸ್ಕೃತರ ಪರವಾಗಿ ದಾಕ್ಷಾಯಿಣಿ ಮಂಡಿ(ಚಿಮ್ಮಡ), ಶೋಭಾ ಮೇಡೆಗಾರ(ಹೊನಗಣಹಳ್ಳಿ ಜಿ.ವಿಜಯಪುರ), ಸೋಮಲಿಂಗ ಬೇಡರ (ಮನ್ನಿಕೇರಿ), ಶಿವಪ್ರಕಾಶಸ್ವಾಮಿ ಸರಗಣಾಚಾರಿಮಠ (ಮುಧೋಳ), ನಾರಾಯಣ ಶಾಸ್ತ್ರಿ (ಕುಂಬಾರಹಳ್ಳ) ತಮ್ಮ ಅನಿಸಿಕೆ ಹಂಚಿಕೊಂಡರು.

ಮುಖ್ಯ ಶಿಕ್ಷಕ ಶಂಕರ ಲಮಾಣಿ ಪ್ರಾರ್ಥನೆ ಗೀತೆ ಹಾಡಿದರು. ಸಾಹಿತಿ ಬಾಹುಬಲಿ ಬಿರಾದಾರಪಾಟೀಲ ಸ್ವಾಗತಿಸಿದರು. ಕ.ಸಾ.ಪ.. ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ತಳಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಹಿತಿ ಗುರುನಾಥ ಸುತಾರ ಅತಿಥಿಗಳನ್ನು ಪರಿಚಯಿಸಿದರು. ಭಾಗ್ಯಶ್ರೀ ಕೋಟಿ ನಿರೂಪಿಸಿದರು. ಬಸವರಾಜ ಗಿರಗಾಂವಿ ವಂದಿಸಿದರು.

# ಆಸಂಗಿ ಪಿಕೆಪಿಎಸ್: ಅಮೃತ ಮಹೋತ್ಸವ



**ರಬಕವಿ-ಬನಹಟ್ಟಿ :** 75ವರ್ಷಗಳಿಂದ ನಿರಂತರ ಸೇವೆ ಮೂಲಕ ಮದನಮಟ್ಟಿ, ಅಸ್ಕಿ ಹಾಗು ಆಸಂಗಿ ಗ್ರಾಮಗಳ ರೈತರ ಹಾಗು ಜನಸಾಮಾನ್ಯರ ಜೀವನಾಡಿಯಾಗಿ ಇಂದಿಗೂ ಸೇವೆಯಲ್ಲಿರುವ ಪಿಕೆಪಿಎಸ್ ಸಂಘವು ಪ್ರಸಕ್ತ ವರ್ಷ 17.45 ಲಕ್ಷ ರೂ.ಗಳಷ್ಟು ಲಾಭ ಗಳಿಕೆಯಲ್ಲಿ ಯಶಸ್ಸು ಕಂಡಿದೆ ಎಂದು ಸಂಘದ ಅಧ್ಯಕ್ಷ ಬಾಬಾಗೌಡ ಪಾಟೀಲ ತಿಳಿಸಿದರು.

ಆಸಂಗಿಯ ಸಂಘದ ಆವರಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ರೈತರಿಗೆ ಶೂನ್ಯ ಬಡ್ಡಿ ದರದೊಂದಿಗೆ ಇತರೆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಇದೀಗ ಅಮೃತ ಮಹೋತ್ಸವನ್ನು ವರ್ಷಪೂರ್ತಿ ಆಚರಿಸಲಾಗುವದೆಂದರು. ಉಪಾಧ್ಯಕ್ಷ ಶ್ರೀಶೈಲ ತೇಲಿ, ಯಮನಪ್ಪ ಪದ್ದಿ, ರವಿ ಗಾಯಕವಾಡ, ರಾಮಪ್ಪ ತಮದಡ್ಡಿ, ವಿಜಯ ಕೊಕಟನೂರ, ಸಾತಪ್ಪ ಧೂಪದಾಳ, ಗೋದವ್ವ ಸಿಂಧೆ, ನೀಲವ್ವ ಮಠದ, ಶ್ರೀಮಂತ ಹರಿಜನ, ಪಾಂಡು ಕೋಲಿ, ಭಾರತಿ ಸಣ್ಣಕ್ಕಿ, ಎಂ.ಎಸ್. ಪಾಟೀಲ ವೇದಿಕೆ ಮೇಲಿದ್ದರು. ಸದಾಶಿವ ಹುಲಗಬಾಳಿ, ವರ್ಧಮಾನ ಕೋರಿ, ಪಾಂಡು ಸಾಲ್ಗುಡಿ, ಅಜಿತ ಶಿರಹಟ್ಟಿ, ಬಸವರಾಜ ಮೋಪಗಾರ, ಅಮೀನಸಾಬ ಅಥಣಿ, ಪ್ರಹ್ಲಾದ ಕಮತಗಿ, ಬಸವರಾಜ ಮದಲಮಟ್ಟಿ ಸೇರಿದಂತೆ ಇತರರಿದ್ದರು.

# ಮೂಡಲಗಿ ಅರ್ಬನ್ ಬ್ಯಾಂಕಿಗೆ 70.22 ಲಕ್ಷ ಲಾಭ: ಢವಳೇಶ್ವರ

**ಮೂಡಲಗಿ :** ದಿ. ಮೂಡಲಗಿ ಕೋ-ಆಪ್ ಬ್ಯಾಂಕಿನ 2023-24ನೆಯ ಆರ್ಥಿಕ ವರ್ಷದ ಕೊನೆಯಲ್ಲಿ 70.22 ಲಕ್ಷ ಲಾಭವನ್ನು ಗಳಿಸಿ ಪ್ರಗತಿಯಲ್ಲಿ ಸಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಸುಭಾಸ ಢವಳೇಶ್ವರ ಹೇಳಿದರು.

ಪಟ್ಟಣದ ಪ್ರತಿಷ್ಠಿತ ದಿ.ಮೂಡಲಗಿ ಕೋ-ಆಪ್ ಬ್ಯಾಂಕಿನ ವಾರ್ಷಿಕ ಸರ್ವ ಸಾಧರಣಾ ಸಭೆ ಬ್ಯಾಂಕಿನ ಸಭಾ ಭವನದಲ್ಲಿ 74 ನೆಯವಾರ್ಷಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು, ಪ್ರಸ್ತುತ ಸಾಲಿನಲ್ಲಿ ಬ್ಯಾಂಕಿಗೆ 7291 ಸದಸ್ಯರನ್ನು ಹೊಂದಿ, 2.21 ಕೋಟಿ ಶೇರು ಬಂಡವಾಳ, 124 ಕೋಟಿ ಠೇವುಗಳು, 8. 8 ಕೋಟಿ ನಿಧಿಗಳು, 139 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿ 73.64 ಕೋಟಿ ಸಾಲವಿತರಿಸಿ 70.22 ಲಕ್ಷ ಲಾಭ ಗಳಿಸಿದೆ ಎಂದರು.

ಪ್ರತಿ ವರ್ಷವೂ ಅಡಿಟ್‌ದಲ್ಲಿ 'ಅ' ಶ್ರೇಣಿಯನ್ನು ಪಡೆದುಕೊಂಡಿದೆ. ಠೇವುದಾರರು, ಸಾಲಗಾರರು, ಆಡಳಿತ ಮಂಡಳಿ ಸಿಬ್ಬಂದಿಗಳ ಸಹಕಾರ ಮುಖ್ಯವಾಗಿದೆ, ಹಾಗಾಗಿ ಗ್ರಾಹಕರ ವಿಶ್ವಾಸವನ್ನು ಕಾಯ್ದುಕೊಂಡು ಬಂದಿದೆ




ಎಂದರು.

ಲೆಕ್ಕ ಪರಿಶೋಧಕ ಸೈದಪ್ಪ ಗದಾಡಿ ಮಾತನಾಡಿ ಸಹಕಾರಿ ಸಂಘ/ ಕ್ಷೇತ್ರ ರಾಜ್ಯದಲ್ಲಿ 120 ವರ್ಷಗಳ ಇತಿಹಾಸ ಇರುತ್ತದೆ. ದಿ.ಮೂಡಲಗಿ ಕೋ-ಆಪ್ ಬ್ಯಾಂಕಿಗೆ. 74 ನೆಯ ವರ್ಷ ಇತಿಹಾಸ ಹೊಂದಿರುವುದು.ಆಡಳಿತ ಹಾಗೂ ಸಿಬ್ಬಂದಿಯವರ ಪ್ರಾಮಾಣಿಕ ಶ್ರಮ,ನಿಸ್ವಾರ್ಥ ಸೇವೆಯಿಂದ ವರ್ಷದಿಂದ ವರ್ಷಕ್ಕೆ ಪ್ರಗತಿಯಲ್ಲಿ ಸಾಗುತ್ತಿರುವುದು ಎಂದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಗೌಡಪ್ಪ ಬುದ್ನಿ ವರದಿ ವಾಚನ ಓದಿದರು.

ವೇಧಿಕೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ನವೀನ ಬಡಗನ್ನವರ,ರಾಮದುರ್ಗ ಶಾಖೆಯ ಸಲಹಾ ಸಮಿತಿಯ ಅಧ್ಯಕ್ಷ ಶೀಧರ ಪತ್ತೇಪೂರ, ಚನ್ನಮಲ್ಲಯ್ಯ ನಿರ್ವಾಣಿ ಇದ್ದರು,

ಬ್ಯಾಂಕಿನ ನಿರ್ದೇಶಕರುಗಳಾದ ಡಾ. ಕೃಷ್ಣಾಜಿ ದಂತಿ,ಶಿವಲಿಂಗಪ್ಪ ಗಾಣಿಗೇರ, ರಾಚಯ್ಯ ನಿರ್ಮಾಣಿ,ರುದ್ರಪ್ಪ ವಾಲಿ,ವೀರಪ್ಪ ಬೆಳಕೂಡ, ಹರೀಶ ಅಂಗಡಿ,ಮಹ್ಮದರಫೀಕ್ ತಾಂಬೋಳಿ, ಸುಶೀಲಾ ರಾ.ಸತರಡ್ಡಿ, ಪ್ರಭಾವತಿ ಮುಧೋಳ, ಉಜಾಲಾ ಪೋಳು ಉಪಸ್ಥಿತರಿದ್ದರು.

ಶಾಖಾ ವ್ಯವಸ್ಥಾಪಕ ಚಿದಾನಂದ ಢವಳೇಶ್ವರ ಸ್ವಾಗತಿಸಿದರು,ಸಹಾಯಕ ವ್ಯವಸ್ಥಾಪಕ ಮಹೇಶ ಮಡಿವಾಳರ ನಿರೂಪಿಸಿ ವಂದಿಸಿದರು.

# ಸರ್ಕಾರದ ಸಹಾಯ ಪಡೆದರೂ ಹಾನಿಯಾಗಬಾರದು



**ರಬಕವಿ-ಬನಹಟ್ಟಿ :** ದೇಶದಲ್ಲಿಯೇ ಹೆಸರಾಗಿದ್ದ ಬನಹಟ್ಟಿ ಸಹಕಾರಿ ನೂಲಿನ ಗಿರಣಿಗೆ ಮತ್ತಷ್ಟು ಆರ್ಥಿಕ ಸಂಕಷ್ಟ ಎದುರಾಗಿದ್ದು ವಿಷಾದ. ಸರ್ಕಾರದ ಸಹಾಯ ಧನ ಪಡೆದರೂ ಹಾನಿಯಾಗಿರುವದೇ ಯಕ್ಷ ಪ್ರಶ್ನೆಯಾಗಿದೆ ಎಂದು ತೇರದಾಳ ಶಾಸಕ ಸಿದ್ದು ಸವದಿ ಕಳವಳ ವ್ಯಕ್ತಪಡಿಸಿದರು.

ರವಿವಾರ ಗಿರಣಿ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜಕೀಯ ಬೆರೆಸದೆ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕಿದೆ. ಗಿರಣಿಯ ಉಳಿವಿಗಾಗಿ ನಿರಂತರ ಬೆಂಬಲ ನನ್ನದಾಗಿದ್ದು, ಸಾಮೂಹಿಕ ಚರ್ಚೆಯ ಮೂಲಕ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದರು.

ಗಿರಣಿ ಅಧ್ಯಕ್ಷ ಶ್ರೀಶೈಲ ಬೀಳಗಿ ಮಾತನಾಡಿ, 50 ವಸಂತಗಳನ್ನು ಕಂಡು ಅಮೃತ ಮಹೋತ್ಸವ ಆಚರಣೆಯಲ್ಲಿರುವ ಸಂದರ್ಭ ಗಿರಣಿಯ ಪುನಶ್ಚೇತನಕ್ಕೆ ಹೆಚ್ಚಿನ ಒತ್ತು ನೀಡಿ ಸದಸ್ಯರ ವಿಶ್ವಾಸದಿಂದ ಮತ್ತೆ ಗತವೈಭವಕ್ಕೆ ತರಬೇಕಿದ್ದು, ಎಲ್ಲರ ಸಹಕಾರ ಅಗತ್ಯವಿದೆ. ಪ್ರಮುಖವಾಗಿ ಕೇಂದ್ರ ಹಾಗು ರಾಜ್ಯ ಸರ್ಕಾರ ನೇಕಾರರಿಂದಲೇ ಸ್ಥಾಪಿತಗೊಂಡಿರುವ ಏಕೈಕ ನೂಲಿನ ಗಿರಣಿಯಾಗಿರುವ ಬನಹಟ್ಟಿ ಸಹಕಾರಿ ನೂಲಿನ ಗಿರಣಿಗೆ ಸಹಕಾರ ನೀಡಬೇಕಿದ್ದು, ಜನಪ್ರತಿನಿಧಿಗಳ ಸೇವೆ ಮುಖ್ಯವಾಗಿದೆ ಎಂದರು.

ಉಪಾಧ್ಯಕ್ಷ ರಾಜು ಭದ್ರನ್ನವರ, ನಗರಾಧ್ಯಕ್ಷೆ ವಿದ್ಯಾ ದಭಾಡಿ, ಉಪಾಧ್ಯಕ್ಷೆ ದೀಪಾ ಗಾಡಿವಡ್ಡರ, ಸ್ಥಾಯಿ ಸಮಿತಿ ಚೇರಮನ್ ಪ್ರವೀಣ ಬುದ್ನಿ, ಸುರೇಶ ಶಿರೋಳ, ಗಂಗಪ್ಪ ಮುಗತಿ, ವಿಜಯ ಜುಂಜಪ್ಪನವರ, ಪರಪ್ಪ ಉರಭಿನವರ, ಚಂದ್ರು ಕುಲಗೋಡ, ದೇವೇಂದ್ರ ಬಸಪ್ಪಗೋಳ, ಶ್ರೀಶೈಲ ಗಸ್ತಿ, ಚಿದಾನಂದ ಮಟ್ಟಿಕಲ್ಲಿ, ನೀಲವ್ವ ಬಾಣಕಾರ, ಗಿರಮಲ್ಲಪ್ಪ ಕೆರೂರ, ರಾಜು ಗುಂಡಿ, ವ್ಯವಸ್ಥಾಪಕ ನಿರ್ದೇಶಕ ಕೆ.ಆರ್. ಪ್ರಭಾಕರ ವೇದಿಕೆ ಮೇಲಿದ್ದರು.

ಚನವೀರಪ್ಪ ಹಾದಿಮನಿ, ರಾಮಣ್ಣ ಭದ್ರನ್ನವರ, ಶಂಕರ ಸೊರಗಾಂವಿ, ಗಂಗಾಧರ ಕೊಕಟನೂರ, ಬಸವರಾಜ ಭದ್ರನ್ನವರ, ಸಿದ್ರಾಮಪ್ಪ ಸವದತ್ತಿ, ದುಂಡಪ್ಪ ಮಾಚಕನೂರ, ಸುರೇಶ ಚಿಂಡಕ, ಪ್ರಭು ಉಮದಿ, ಮಲ್ಲಣ್ಣ ಕಕಮರಿ, ಓಂಪ್ರಕಾಶ ಕಾಬರಾ, ಸುರೇಂದ್ರ ಹಜಾರೆ, ಬಗಾಡೆ ಸೇರಿದಂತೆ ಅನೇಕರಿದ್ದರು.

# ಗಮನ ಸೆಳೆದ ಕಿರುತೆರೆ ಕಲಾವಿದರ ರಸಮಂಜರಿ ಕಾರ್ಯಕ್ರಮ





**ಮಹಾಲಿಂಗಪುರ :** ಮಹಾಲಿಂಗೇಶ್ವರ ಜಾತ್ರಾಮಹೋತ್ಸವ ನಿಮಿತ್ಯ ಶನಿವಾರ ರಾತ್ರಿ ಶ್ರೀಮಠದ ಗೋಶಾಲೆ ಹತ್ತಿರ ನಡೆದ ಕಿರುತೆರೆ ಕಲಾವಿದರ ರಸಮಂಜರಿ ಕಾರ್ಯಕ್ರಮವು ಎಲ್ಲರ ಗಮನ ಸೆಳೆಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಹಾಂತೇಶ ಹಿಟ್ಟಿನಮಠ ಮಾತನಾಡಿ ಪ್ರಸಕ್ತ ವರ್ಷದ ಜಾತ್ರಾ ಮಹೋತ್ಸವವನ್ನು 6 ದಿನಗಳ ಜಾತ್ರೆಯನ್ನಾಗಿ ರೂಪಿಸಿ, ಕುಸ್ತಿ ಪಂದ್ಯಾವಳಿಯನ್ನು ಪ್ರತ್ಯೇಕವಾಗಿ ಆಯೋಜಿಸಿದ್ದರಿಂದ ಕುಸ್ತಿ ಪಂದ್ಯಾವಳಿಯು ವಿಜೃಂಭಣೆಯಿಂದ ನಡೆಯಿತು. ಜಾತ್ರಾ ಮಹೋತ್ಸವ ನಿಮಿತ್ಯ ಹಮ್ಮಿಕೊಂಡ ರಸಮಂಜರಿಕಾರ್ಯಕ್ರಮವುಯಶಸ್ವಿಯಾಗಲಿ ಎಂದರು.

ರಸಮಂಜರಿ ಕಾರ್ಯಕ್ರಮವನ್ನು ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಜಾತ್ರಾ ಕಮಿಟಿ ಅಧ್ಯಕ್ಷ ರವಿಗೌಡ ಪಾಟೀಲ ಉದ್ಘಾಟಿಸಿದರು. ಶ್ರೀಮಠದ ಈಶ್ವರ ಮಠದ, ಠಾಣಾಧಿಕಾರಿ ಕಿರಣ ಸತ್ತಿಗೇರಿ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಹಿರಿಯರಾದ ಲಕ್ಷ್ಮಣಗೌಡ ಪಾಟೀಲ, ಬಸನಗೌಡ ಪಾಟೀಲ, ಅಶೋಕಗೌಡ ಪಾಟೀಲ, ಮಹಾಲಿಂಗಪ್ಪ ತಟ್ಟಿಮನಿ, ಬಸವರಾಜ ರಾಯರ, ಕೃಷ್ಣಗೌಡ ಪಾಟೀಲ, ಸಿದ್ದು ಪಾಟೀಲ, ಶೇಖರ ಅಂಗಡಿ, ಬಸವರಾಜ ಬಂಡಿವಡ್ಡರ, ಹುಚ್ಚೇಶ ವಡ್ಡರ, ಬಂದು ಪಕಾಲಿ, ಯಲ್ಲಪ್ಪ ಹಟ್ಟಿ, ಮಲ್ಲಪ್ಪ ಯರಡ್ಡಿ, ಚನ್ನಪ್ಪ ಪಟ್ಟಣಶೆಟ್ಟಿ, ಚನ್ನಪ್ಪ ಕೋಳಿಗುಡ್ಡ, ವಿಠ್ಠಲ ಹಲಗಣಿ, ಶಂಕರಗೌಡ ಪಾಟೀಲ, ರಾಜು ತಾಳಿಕೋಟಿ, ಮಹಾಲಿಂಗ ಮಾಳಿ, ಪಪ್ಪು(ವಿನೋದ)ಹುರಕಡ್ಲಿ, ಶ್ರೀಶೈಲ ಭಜಂತ್ರಿ, ನಾರನಗೌಡ ಉತ್ತಂಗಿ ಸೇರಿದಂತೆ ಹಲವರು ಇದ್ದರು.

**ತಡರಾತ್ರಿವರೆಗೆ ರಂಜಿಸಿದ ಕಲಾವಿದರು :** ಕಿರುತೆರೆಯ ಕಾಮಿಡಿ ಕಿಲಾಡಿಗಳು ಖ್ಯಾತಿಯ ಕಲಾವಿದರಾದ ಗೋವಿಂದೇಗೌಡ, ದಿವ್ಯಶ್ರೀ, ದಾನಪ್ಪ ಮೂಡಲಗಿ, ಸಂಜು ಬಸಯ್ಯ, ಪಲ್ಲವಿ ಬಳ್ಳಾರಿ, ವಾಣಿಶ್ರೀ, ಬೃಂಗೇಶ, ಪ್ರೀಯಾಂಕ ಸೋಲ್ಲಾಪೂರ, ಮೇಘಾ ಹುಬ್ಬಳ್ಳಿ ಸೇರಿದಂತೆ ಹಲವು ಕಲಾವಿದರು ರಾತ್ರಿ 8-30ರಿಂದ ಮಧ್ಯಾರಾತ್ರಿ 2 ಗಂಟೆವರೆಗೆ ನಡೆಸಿಕೊಟ್ಟ ಗಾಯನ, ಹಾಸ್ಯ ಚಟಾಕಿ, ನೃತ್ಯ, ಲಾವಣಿ ನೃತ್ಯ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆದವು. ರಸಮಂಜರಿ ವೀಕ್ಷಣೆಗಾಗಿ ಸಾವಿರಾರು ಜನರು ಆಗಮಿಸಿದ್ದರು.

# ಯುವಜನೋತ್ಸವ-2024: ಹೆಚ್‌ಐವಿ ಏಡ್ಸ್ ನಿಯಂತ್ರಣ ಜಾಗೃತಿ

**ಕೊಪ್ಪಳ :** ಯುವಜನೋತ್ಸವ-2024ರ ಅಂಗವಾಗಿ ಜಿಲ್ಲಾಮಟ್ಟದಲ್ಲಿ ಹೆಚ್.ಐ.ವಿ. ಏಡ್ಸ್ ತಡೆಗಟ್ಟಲು ತೀವ್ರಗೊಳಿಸಿದ ಐ.ಇ.ಸಿ ಪ್ರಚಾರ ಆಂದೋಲನದ ನಿಮಿತ್ಯ ಅಂತರ್ ಪದವಿ ಕಾಲೇಜ್ 18 ರಿಂದ 25 ವರ್ಷದೊಳಗಿನ ಪುರುಷಮತ್ತುಮಹಿಳಾವಿದ್ಯಾರ್ಥಿಗಳಿಗೆಕಬಡ್ಡಿ ಪಂದ್ಯಾವಳಿಯು ತಾಲೂಕಾ ಕ್ರೀಡಾಂಗಣದಲ್ಲಿ ಸೆ.20ರಂದು ನಡೆಯಿತು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆ, ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ ಹಾಗೂ ಜಿಲ್ಲಾ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಲಿಂಗರಾಜು ಟಿ ಅವರು ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ಹೆಚ್.ಐ.ವಿ/ಏಡ್ಸ್ ರೋಗಿಗಳ ಸಂಖ್ಯೆಯನ್ನು ಸೊನ್ನೆಗೆ ತರಲು ಸರ್ಕಾರಹಲವುವಿನೂತನಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಯುವ ಸಮುದಾಯಕ್ಕೆ ಅರಿವು ಮೂಡಿಸಲಾಗುತ್ತಿದೆ. ಹೆಚ್.ಐ.ವಿ ಖಾಯಿಲೆ ಮುಖ್ಯವಾಗಿ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ, ಸಂಸ್ಕರಿಸದ ಸೂಜಿ ಮತ್ತು ಸಿರಂಜಿಗಳಿಂದ, ರಕ್ತ ಪರೀಕ್ಷೆ ಮಾಡದೇ ರಕ್ತ ಪಡೆಯುವುದರಿಂದ ಹಾಗೂ ಸೋಂಕಿತ ತಂದೆ-ತಾಯಿಂದ ಮಗುವಿಗೆ ಹರಡುತ್ತದೆ. ಹೆಚ್ಚಾಗಿ 15 ರಿಂದ 29 ವರ್ಷದೊಳಗಿನ ಯುವಕರೇಈಖಾಯಿಲೆಗೆಬಲಿಯಾಗುತ್ತಿದ್ದಾರೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಪ್ರಚಾರ ಕೈಗೊಂಡು ಪ್ರತಿಯೊಬ್ಬರಿಂಗೂ ಹೆಚ್.ಐ.ವಿ ಏಡ್ಸ್ ಹರಡದಂತೆ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಲು ಜಿಲ್ಲೆಯ ಎಲ್ಲಾ ಯುವಕರು ಹೆಚ್.ಐ.ವಿ ಏಡ್ಸ್ ಬಗ್ಗೆ ಅರಿವು ಹೊಂದಬೇಕು ಎಂದರು. ಪುರುಷ ಮತ್ತು ಮಹಿಳಾ ಕಬಡ್ಡಿ ತಂಡದ ಸದಸ್ಯರು ಬಹಳಷ್ಟು ಉತ್ಸಾಹದಿಂದ ಈ ಕ್ರೀಡಾಕೂಟದಲ್ಲಿ ಭಾಗಿಯಾಗಿರುವುದು ಅಭಿನಂದನಾರ್ಹ ಸಂಗತಿಯಾಗಿದೆ.

ಸೋಲು ಗೆಲುವು ಮುಖ್ಯವಲ್ಲ ಕ್ರೀಡೆಯಲ್ಲಿ ಭಾಗವಹಿಸುವುದು ಮುಖ್ಯವಾಗಿದೆ. ಕೊಪ್ಪಳ ಜಿಲ್ಲೆಯನ್ನು ಹೆಚ್.ಐ.ವಿ ಏಡ್ಸ್ ಮುಕ್ತ ಜಿಲ್ಲೆಯನ್ನಾಗಿಮಾಡುವನಿಟ್ಟಿನಲ್ಲಿಪ್ರತಿಯೊಬ್ಬರು ಖಾಯಿಲೆಯ ಬಗ್ಗೆ ತಿಳಿದುಕೊಂಡು ತಮ್ಮ ತಮ್ಮ ಹಳ್ಳಿಗಳಲ್ಲಿ ಮತ್ತು ನಗರ ಪ್ರದೇಶದ ವಿವಿಧೆಡೆ ಅರಿವು ಮೂಡಿಸಿ, ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಲು ಕೈ ಜೋಡಿಸುವಂತೆ ಯುವಕರಿಗೆ ಸಲಹೆ ಮಾಡಿದರು. ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಗಳು ಹಾಗೂ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ॥ ಶಶಿಧರ ಎ ಮಾತನಾಡಿ, ಹೆಚ್.ಐ.ವಿ ಏಡ್ಸ್ ರೋಗ ತಡೆಗಟ್ಟಲು ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಶಾಲಾ ಕಾಲೇಜುಗಳಲ್ಲಿ, ಸಮುದಾಯದಲ್ಲಿ ನಿರಂತರವಾಗಿ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಂದ ಜಾಗೃತಿ ಮೂಡಿಸಲಾಗುತ್ತಿದೆ ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಜಿಲ್ಲಾಮಟ್ಟದಲ್ಲಿ ರಸಪ್ರಶ್ನೆ ಕಾರ್ಯಕ್ರಮ, ಕಾಲೇಜು ವಿದ್ಯಾರ್ಥಿಗಳಿಗೆ ಮ್ಯಾರಥಾನ್ ಸ್ಪರ್ಧೆ ಹಮ್ಮಿಕೊಂಡು ಯಶಸ್ವಿಗೊಳಿಸಲಾಗಿದೆ. ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರವನ್ನು ನೀಡಲಾಗಿದೆ. ಹೆಚ್.ಐ.ವಿ ಸೋಂಕಿತರನ್ನು ಗೌರವದಿಂದ ಕಾಣಬೇಕು ಅವರಿಗೂ ಕೂಡ ಬದುಕುವ ಹಕ್ಕಿದೆ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಂಡು ಇತರರಿಗೂ ತಿಳಿಸಬೇಕೆಂದು ಹೇಳಿದರು. ಇದಕ್ಕೆ ಯಾವುದೇ ನಿರ್ದಿಷ್ಟವಾದ ಚಿಕಿತ್ಸೆ ಇರುವುದಿಲ್ಲ. ತಿಳುವಳಿಕೆಯೇ ಒಂದು ಔಷಧಿಯಾಗಿದೆ. ಎಲ್ಲರೂ ಜಾಗೃತರಿಂದ ಇರಬೇಕು. ಈ ಕಬಡ್ಡಿ ಪಂದ್ಯಾವಳಿಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆಬಹುಮಾನಮತ್ತುಸಿಲ್ಡ್(ಕಪ್ಪು) ವಿತರಣೆ ಮಾಡಲಾಗುವುದೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ.ಪ್ರಕಾಶ ವಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳಾದ ಡಾ.ಪ್ರಕಾಶ ಹೆಚ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ., ಜಿಲ್ಲಾ ಹೆಚ್.ಐ.ವಿ ಏಡ್ಸ್ ನಿಯಂತ್ರಣ ಕಾರ್ಯಕ್ರಮದ ಜಿಲ್ಲಾ ಮೇಲ್ವಿಚಾರಕಾರದ ಮಾಹಾಂತೇಶ, ದೈಹಿಕ ಶಿಕ್ಷಣಾಧಿಕಾರಿಗಳು, ಉಪನ್ಯಾಸಕರು, ಆಪ್ತಸಮಾಲೋಚಕರು, ಎನ್.ಜಿ.ಓ ಪ್ರತಿನಿಧಿಗಳು, ಸಿಬ್ಬಂದಿಗಳು, ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಆಪ್ತ ಸಮಾಲೋಚಕರಾದ ಅಂಬರೇಶ ನಿರೂಪಿಸಿದರು.

# ಪ್ರಾಮಾಣಿಕ ಪರಿಶ್ರಮದಿಂದ ಸಾಧನೆ ಸಾಧ್ಯ: ಪ್ರಭುಶ್ರೀ

## ಸುಯೋಗ ವಿವಿದೊದ್ದೇಶಗಳ ಸಹಕಾರಿ ಸಂಘದ ಮಹಾಸಭೆ





**ಚಿಮ್ಮಡ :** ನಿಷ್ಠೆ ಹಾಗೂ ಪ್ರಾಮಾಣಿಕವಾಗಿ ದುಡಿದರೆಯಾವುದೇಸಾಧನೆಸಾಧಿಸಬಹುದು, ಸ್ವಾಭಿಮಾನಿಗಳಾಗಿ ಬದುಕಲು ಪ್ರತಿಯೊಬ್ಬರು ಸ್ವಂತ ಉದ್ದಿಮೆ ಸ್ಥಾಪಿಸಿ ಉದ್ಯೋಗದಾತರಾಗಬೇಕೆಂದು ಸ್ಥಳೀಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ಸುಯೋಗ ವಿವಿದೊದ್ದೇಶಗಳ ಸೌಹಾರ್ದ ಸಹಕಾರಿ ಸಂಘದ 12ನೇ ವಾರ್ಷಿಕ ಮಹಾಸಭೆಯ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು ಯುವಕರು ಸರಕಾರಿ ನೌರಿಗಾಗಿ ಕಾಯದೆ ಸ್ವಂತ ಉದ್ದಿಮೆ ಸ್ಥಾಪಿಸುವತ್ತ ಹೆಜ್ಜೆ ಹಾಕಬೇಕಾದೆ ಈ ನಿಟ್ಟಿನಲ್ಲಿ ನಿಂಗಣ್ಣ ಪೂಜಾರಿಯವರ ಸುಯೋಗ ಸಂಸ್ಥೆ ಯಶಸ್ವಿಯಾಗಿ ದಾಪುಗಾಲು ಹಾಕುತ್ತ ನೂರಾರು ಜನರಿಗೆ ಉದ್ಯೋಗ ನೀಡುತ್ತಿರುವುದು ಹೆಮ್ಮೆಯ ವಿಚಾರ ಇಂಥಹ ಯಶಸ್ವಿ ಉದ್ದಿಮೆಗಳು ಪ್ರತಿಯೊಂದು ಭಾಗಗಳಲ್ಲಿ ಬೆಳೆದರೆ ರೈತರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ವಾಗಲಿದೆ ಎಂದರು.

ರಘುನಾಥ ಪ್ರೀಯ ಸಾಧು ಮಹಾರಾಜರ ಮಠದ ಶ್ರೀ ಜನಾರ್ಧನ ಮಹಾರಾಜರು ಮಾತನಾಡಿ ಸೌಹಾರ್ದ ಸಹಕಾರಿ ಮೂಲಕ ನೆರೆಯ ಜಿಲ್ಲೆಗಳಿಗೆ ಶಾಖೆಗಳನ್ನು ತೆರೆಯುವ ಮೂಲಕ ರಾಜ್ಯದಾದ್ಯಂತ ವಿಸ್ತರಿಸಿ ನಮ್ಮ ರೈತರಿಗೆ, ವ್ಯಾಪಾರಿಗಳಿಗೆ ಹಾಗೂ ಉದ್ಯೋಗದಾತರಿಗೆ ಅನುಕೂಲವಾಗಲಿ ಇಲ್ಲಿನ ರೈತರು ರಾಜ್ಯಕ್ಕೆ ಮಾದರಿಯಾಗಲಿ ಎಂದು ಹಾರೈಸಿದರು.

ಸಲಹಾ ಸಮೀತಿಯ ಸದಸ್ಯ ಪ್ರಭು ನೇಸೂರ, ಇಲಾಹಿ ಜಮಖಂಡಿ ಮಾತನಾಡಿದರು ಹಲವು ಶಾಖೆಗಳ ವ್ಯವಸ್ಥಾಪಕರು ವರದಿ ಮಂಡಿಸಿದರು. ಸಂಸ್ಥೆಯ ಅಧ್ಯಕ್ಷ ನಿಂಗಣ್ಣ ಪೂಜಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷ ಪುಂಡಲಿಕಪ್ಪಾ ಪೂಜಾರಿ, ರಾಮಣ್ಣ ಮುಗಳಖೋಡ, ಆರ.ಎಂ. ಬಗನಾಳ, ಬಾಳಪ್ಪ ಹಳಿಂಗಳಿ, ಗ್ರಾ.ಪಂ. ಮಾಜಿ ಅಧ್ಯಕ್ಷ ಬೀರಪ್ಪಾ ಹಳೆಮನಿ ಪಿಕೆಪಿಎಸ್ ಮಾಜಿ ಅಧ್ಯಕ್ಷ ಬೀರಪ್ಪಾ ಗಡದಿ, ಶಿವಪ್ಪಾ ಬೆಳಗಲಿ, ಶಿವಾನಂದ ಉರಭಿನವರ ಸೇರಿದಂತೆ ಹಲವಾರು ಜನ ಪ್ರಮುಖರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದೇ ಸಂಧರ್ಬದಲ್ಲಿ ಹಲವಾರು ಜನ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

# ತಿಮ್ಮಪ್ಪನ ಪ್ರಸಾದದಲ್ಲಿ ದನ-ಹಂದಿ ಕೊಬ್ಬು ಬಳಕೆ: ಈಶ್ವರಪ್ಪ



**ಜಮಖಂಡಿ :** ತಿರುಪತಿತಿಮ್ಮಪ್ಪನ ಪ್ರಸಾದ ತಯಾರಿಕೆಗೆ ಬಳಸುವ ತುಪ್ಪದಲ್ಲಿ ದನದ ಮತ್ತು ಹಂದಿ ಕೊಬ್ಬು ಮಿಶ್ರಣ ಆಗಿದೆ ಎಂಬ ಮಾಹಿತಿ ಹೊರಬಂದಿರುವುದು ಆಘಾತಕಾರಿ ಅಂಶವಾಗಿದೆ ಎಂದು ಮಾಜಿ ಉಪಮುಖ್ಯ ಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

ತಾಲೂಕಿನ ಜಕನೂರ ಗ್ರಾಮದ ಮಾದಣ್ಣ ಮದಗೊಂಡೇಶ್ವರ ಸಿದ್ಧಾಶ್ರಮದಲ್ಲಿ 29ನೇ ಸಿದ್ಧಸಿರಿಸಂಭ್ರಮ, ಬಂಡಾರ ಸಂಸ್ಕೃತಿ, ಜನಪದ ಹಾಗೂ ಡೊಳ್ಳಿನ ಕಲಾಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿರುವ ಮುಖ್ಯಮಂತ್ರಿ ಹಿಂದು ಪವಿತ್ರ ದೇವಸ್ಥಾನದ ಪ್ರಸಾದಕ್ಕೆ ಪ್ರಾಣಿಗಳಕೊಬ್ಬುಸೇರಿಸಿದ್ದುಹಿಂದುಸಮಾಜಕ್ಕೆ ಬಗೆದ ದ್ರೋಹವಾಗಿದೆ. ಸಮುದಾಯಗಳು ಹಗುರವಾಗಿ ಪರಿಗಣಿಸದೇ ಎಚ್ಚರಿಕೆ ವಹಿಸಬೇಕಾಗಿದೆ. ಹಿಂದುಗಳ ವಿಷಯದಲ್ಲಿ ಚೆಲ್ಲಾಟ ಆಡುತ್ತಿರುವವರನ್ನು ಎಂದಿಗೂ ಕ್ಷಮಿಸಬಾರದು. ಹಿಂದುಗಳ ಆರಾಧ್ಯದೈವ ತಿಮ್ಮಪ್ಪನ ಪ್ರಸಾದವನ್ನು ಕಲಬೆರಿಕೆ ಮಾಡಿದ್ದು ಅಕ್ಷಮ್ಯ ಅಪರಾಧ. ಹಿಂದುಗಳ ಭಾವನೆಗಳನ್ನು ಲೆಕ್ಕಿಸದೆ ಇಂಥಹ ಕೃತ್ಯಗಳನ್ನು ನಡೆಸುತ್ತಿರುವರ ವಿರುದ್ಧ ಜಾಗೃತರಾಗಿ ತಕ್ಕಪಾಠ ಕಲಿಸಬೇಕು ಎಂದರು.

ನಾಗಮಂಡಲದ ಗಣೇಶ ಉತ್ಸವದ ಮೆರವಣಿಗೆಯಲ್ಲಿ ಗಲಭೆಯಾಗಿ ಆಸ್ತಿ-ಪಾಸ್ತಿ ಕಳೆದುಕೊಂಡ ಅಮಾಯಕ ಹಿಂದುಗಳನ್ನು ರಾಜ್ಯದ ಕಾಂಗ್ರೆಸ್ ಸರ್ಕಾರ ಬಂಧಿಸಿದೆ. ಗಲಭೆ ಮಾಡಿದವರನ್ನು ತಪ್ಪಿಸ್ತರನ್ನು ಕೈಬಿಡಲಾಗಿದ್ದು ಅದರಲ್ಲಿ 32 ಹಿಂದು ಯುವಕರು ಬಂಧಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಓಲೈಕೆ ರಾಜಕಾರಣ ಮಾಡುತ್ತಿದೆ. ದೇಶ, ಧರ್ಮ, ಸಂಸ್ಕೃತಿ ಬಗ್ಗೆ ಮಾತನಾಡಿದರೆ ಕೋಮುವಾದ ಪಟ್ಟ ಕಟ್ಟಲಾಗುತ್ತಿದೆ. ದೇಶದ ಸ್ವಾತಂತ್ರಕ್ಕಾಗಿಲಕ್ಷಾಂತರದೇಶಭಕ್ತರು ಪ್ರಾಣತ್ಯಾಗ ಮಾಡಿದ್ದಾರೆ. ನಮಗೆ ಇವತ್ತಿನವರೆಗೂ ಪೂರ್ಣ ಸ್ವಾತಂತ್ರ ದೊರೆತಿಲ್ಲ ಪಾಕಿಸ್ಥಾನವನ್ನು ನಮ್ಮ ದೇಶದಲ್ಲಿ ಸೇರಿಸಿಕೊಂಡು ಅಖಂಡ ಭಾರತ ದೇಶವನ್ನು ರಚಿಸುತ್ತೇವೆ ಎಂದರು. ಇದೇ ಸಂದರ್ಭದಲ್ಲಿ ಸಿದ್ಧಾಶ್ರಮದ ಮದುಗೊಂಡೇಶ್ವರ ಸ್ವಾಮಿಗಳು ನೇತೃತ್ವದಲ್ಲಿ 29ನೇ ಸಿದ್ಧಸಿರಿ ಕಾರ್ಯಕ್ರಮ ನಡೆಯಿತು, ವೇದಿಕೆಯಲ್ಲಿ ಪಂಚಮಸಾಲಿ ಪೀಠದ ಜಯಮೃತ್ಯುಂಜಯಸ್ವಾಮಿಗಳು,ಓಲೇಮಠದ ಡಾ.ಚೆನ್ನಬಸವ ಶ್ರೀಗಳು, ಕೊಣ್ಣೂರಿನ ಡಾ.ವಿಶ್ವಪ್ರಭುದೇವರು, ವಿಜಯಪುರ ಶಾಸಕ ಬಸನಗೌಡ ಯತ್ನಾಳ, ವಿಧಾನ ಪರಿಷತ್ ಸದಸ್ಯರಾದ ಹಣಮಂತ ನಿರಾಣಿ, ತೌಫಿಕ ಪಾರ್ಥನಳ್ಳಿ ಸಹಿತ ಹಲವರು ಇದ್ದರು.

# ಚಿಟ್ ಫಂಡ್ ಕಂಪನಿಗಳಲ್ಲಿ ಹಣ ಹೂಡಿರುವ ಸಾರ್ವಜನಿಕರ ಹಣ ಮರಳಿಸುವಂತೆ ರೈತ ಸಂಘ ಆಗ್ರಹಿಸಿ ಡಿಸಿಗೆ ಮನವಿ ಸಲ್ಲಿಕೆ



**ವಿಜಯಪುರ :** ಅಗ್ರಿಗೋಲ್ಡ್, ಪಿ.ಎ.ಸಿ.ಎಲ್, ಸಮೃದ್ಧ ಜೀವನ ಸೇರಿದಂತೆ ಇನ್ನಿತರ ಕಂಪನಿಗಳಲ್ಲಿ ಕಷ್ಟಪಟ್ಟು ದುಡಿದಿರುವ ಬಡವರು ಹಾಗೂ ರೈತರು ತೊಡಗಿಸಿರುವ ಹಣವನ್ನು ಕೂಡಲೇ ಹಿಂದಿರುಗಿಸಲು ಆದೇಶಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ರೈತ ಸಂಘದ ಜಿಲ್ಲಾ ಅಧ್ಯಕ್ಷ ಸಂಗಮೇಶ ಸಗರ ಅವರು ಕಳೆದ 20 ದಿನಗಳಿಂದ ಧರಣಿ ನಿರತ ವಂಚಿತ ಠೇವಣಿದಾರರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಅವರು ಮಾತನಾಡಿದರು.

6 ವರ್ಷದಲ್ಲಿ ಹಣ ದ್ವಿಗುಣವಾಗುತ್ತದೆ ಎಂಬ ನಂಬಿಕೆಯೊಂದಿಗೆ ಠೇವಣಿದಾರರು ಹೂಡಿಕೆಮಾಡಿದ್ದರು.ಆದರೆಕೇಂದ್ರಸರಕಾರ ಏಕಾಏಕಿ 185 ಚಿಟ್ ಫಂಡ್ ಕಂಪನಿಗಳನ್ನು ಬಂದ್ ಮಾಡಿ ಆದೇಶ ಹೂರಡಿಸಿರುವ ಹಿನ್ನಲೆಯಲ್ಲಿ ಎಲ್ಲಾ ಹೂಡಿಕೆದಾರರು ಚಿಂತೆಗೀಡಾಗುವಂತೆ ಮಾಡಿದೆ. ಈ ಕುರಿತು ಸರಕಾರ ಮಧ್ಯಸ್ತಿಕೆ ವಹಿಸಿ ಹಣ ಹಿಂತುರಿಗಿಸಲು ಆದೇಶ ಮಾಡಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ನಮ್ಮ ಜಿಲ್ಲೆಯಲ್ಲಿ ಅಂದಾಜು 2 ಲಕ್ಷ ಗ್ರಾಹಕರು ಸುಮಾರು 350 ಕೋಟಿ ರೂಗಳ ಹಣವನ್ನು ಹೂಡಿಕೆ ಮಾಡಿದ್ದು, ಹಣ ಹೂಡಿಕೆ ಮಾಡಿರುವ ಸಾರ್ವಜನಿಕರು, ರೈತರು, ಮಧ್ಯಮ ವರ್ಗದ ಜನರು ಎಲ್ಲಿ ಹೋಗಬೇಕು, ಈ ಚಿಟ್ ಫಂಡ್ ಕಂಪನಿಗಳಿಗೆ ಅನುಮತಿ ನೀಡಿ ಅವುಗಳಿಂದ ಹಣ ಠೇವಣಿ ಮಾಡಿಸಿಕೊಂಡಿರುವ ಸರಕಾರ ಈಗ ಕಂಪನಿಯ ಆಸ್ತಿಯನ್ನು ಹರಾಜು ಮಾಡಿ ಹೂಡಿಕೆದಾರರಿಗೆ ಹಣ ನೀಡಬೇಕು ಎಂದು ಆಗ್ರಹಿಸಿದರು.

ಇದೇತರಹನಾಗಿರಾಜ್ಯವ್ಯಾಪಿಅಂದಾಜು40 ಸಾವಿರ ಕೋಟಿ ಹಣ ಹೂಡಿಕೆ ಮಾಡಿದ್ದಾರೆ, ದೇಶವ್ಯಾಪಿ ಅಂದಾಜು 4 ಲಕ್ಷ 20 ಸಾವಿರ ಕೋಟಿ ಹಣ ಹೂಡಿಕೆ ಮಾಡಿದ್ದಾರೆ, ಈಗ ಕೇಂದ್ರ ಸರಕಾರ ದೇಶವ್ಯಾಪಿ 3 ಲಕ್ಷ ಖಾಸಗಿ ಕಂಪನಿಗಳನ್ನು ಏಕಾಏಕಿ ಬಂದ್ ಮಾಡಿದ್ದಾರೆ, ವಂಚನೆಗೊಳಗಾದ ಸಂತ್ರಸ್ತರು ಕಳೆದ 10 ವರ್ಷಗಳಿಂದ ನ್ಯಾಯಕ್ಕಾಗಿ ಸರಕಾರಕ್ಕೆ ಮನವಿ ಮಾಡುತ್ತಾ ಬಂದಿರುತ್ತಾರೆ, ಆದರೆ ಇಲ್ಲಿಯವರೆಗೆ ಸರಕಾರದ ಯಾವುದೇ ಅಧಿಕಾರಿಗಳು ಕಿಂಚಿತ್ತೂ ಕಾಳಜಿ ಮಾಡದೇ ಇರುವುದು ಹೂಡಿಕೆದಾರರಿಗೆ ಆತಂಕ ಮೂಡಿಸಿದೆ. ಹೂಡಿಕೆದಾರರು ಏಜೆಂಟ್‌ರುಗಳಿಗೆ ಹಣ ಕೊಡಿಸಿ ಎಂದು ನಿತ್ಯ ಕಿರಿ ಕಿರಿ ಮಾಡುವುದರಿಂದ ಮನನೊಂದ ಎಷ್ಟೋ ಜನರು ಆತ್ಮಹತ್ಯೆ ಮಾಡಿಕೊಡಿರುವ ಘಟನೆಗಳು ನಡೆದಿವೆ.

6 ವರ್ಷಗಳಲ್ಲಿ ಹಣ ದ್ವಿಗುಣ ಮಾಡಿಕೊಡುವುದಾಗಿ ಹೇಳಿರುವ ಚಿಟ್ ಫಂಡ್ ಕಂಪನಿಗಳು ಸಾವಿರಾರು ಕೋಟಿ ಹಣ ಮಾಡಿಕೊಂಡು ಸಾರ್ವಜನಿಕರಿಗೆ ಮೋಸ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ, ಬಡ್ಸ್ ಕಾಯಿದೆ ಪ್ರಕಾರ 6 ತಿಂಗಳಲ್ಲಿ ಹಣ ಮರಳಿ ನೀಡಬೇಕು, ಕಂಪನಿಗಳು ಹಣ ಕೊಡದಿದ್ದರೆ ಸರಕಾರವೇ ಮಧ್ಯ ಪ್ರವೇಶಿಸಿ ಹಣ ಕೊಡಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕು. ಆದರೆ ಸರಕಾರ ಈ ಹೋರಾಟವನ್ನು ಬಗ್ಗು ಬಡೆಯುವ ಪ್ರಯತ್ನ ಮಾಡುತ್ತಿದೆ ಎಂದು ಅವರು ಆರೋಪಿಸಿದರು.

ರಾಜ್ಯದ ಎಲ್ಲಾ 185 ಚಿಟ್ ಫಂಡ್ ಕಂಪನಿಗಳ ಸ್ತಿರಾಸ್ತಿ ಹಾಗೂ ಜಮಾವಾಣೆಯ ಹಣವನ್ನು ಕಾನೂನು ಬದ್ದವಾಗಿ ಹರಾಜು ಪ್ರಕ್ರಿಯೆ ಕೈಕೊಂಡು ಹೂಡಿಕೆದಾರರಿಗೆ ಹಣವನ್ನು ಮರಳಿಕೊಡಬೇಕು.ಇಲ್ಲದಿದ್ದರೆರಾಜ್ಯವ್ಯಾಪಿ ಹೋರಾಟಕ್ಕೆ ಕರೆ ನೀಡಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

ಈ ವೇಳೆ ವಿಜಯಪುರ ಜಿಲ್ಲಾ ಸಂಚಾಲಕ ರಾಮನಗೌಡ ಪಾಟೀಲ, ನಗರ ಘಟಕದ ಅಧ್ಯಕ್ಷ ಸಂಗಪ್ಪ ಚಲವಾದಿ (ಟಕ್ಕೆ), ವಿಜಯಪುರ ತಾಲೂಕಾ ಅಧ್ಯಕ್ಷ ಮಹಾದೇವಪ್ಪ ತೇಲಿ, ವಿಜಯಪುರ ತಾಲೂಕಾ ಉಪಾಧ್ಯಕ್ಷ ಪ್ರಕಾಶ ತೇಲಿ, ಆಹೇರಿ(ಜ)ಅಧ್ಯಕ್ಷಆತ್ಮಾನಂದಭೈರೋಡಗಿ, ತಿಪ್ಪರಾಯ ಭೈರೋಡಗಿ, ತುಕಾರಾಮ ಡೋಲಸೆ, ರಾಮಣ್ಣ ಹೊಸಮನಿ, ಅಮೋಘಿ ವಾಡೇದ, ಚಂದ್ರಾಮ ಬಿಸನಾಳ, ಜಯಸಿಂಗ್ ರಜಪೂತ, ರಾಮಣ್ಣ ದೇವೂರ, ಮಹಾದೇವ ದೇವೂರ, ಚನ್ನಪ್ಪ ವಾಡೇದ, ಮಹಾದೇವ ವಾಲಿ, ಸಂಗನಗೌಡ ಬಿರಾದಾರ, ಬಸನಗೌಡ ಬಿರಾದಾರ, ಮಲ್ಲನಗೌಡ ಬಿರಾದಾರ, ಸಂಗನ ಬಸಪ್ಪಗೌಡ ಪಾಟೀಲ, ಬಸನಗೌಡ ಬಿರಾದಾರ, ಮಲ್ಲು ಬಾಗೇವಾಡಿ, ಪರಶುರಾಮ ದೇವೂರ, ಆತ್ಮಾನಂದ ದೇವೂರ, ಚನ್ನು ವಾಲಿ, ಲಾಯಪ್ಪ ವಾಘೆ, ಶಂಕರ ವಾಘೆ ಮುಂತಾದ ಪ್ರಮುಖರು ಸೇರಿದಂತೆ ಅನೇಕರು ಇದ್ದರು.

# ನಗರ ಸ್ವಚ್ಛವಾಗಿಡಲು ಪೌರಕಾರ್ಮಿಕರ ಶ್ರಮವಿದೆ: ಪಟೇಲ್



**ಕೊಪ್ಪಳ :** ನಗರ ಸ್ವಚ್ಚವಾಗಿಡಲು ಪೌರ ಕಾರ್ಮಿಕರ ಶ್ರಮ ಬಹಳವಿದೆ ಬೆಳಗಿನ ಜಾವ ಸೂರ್ಯೋದಯ ಆಗುವುದಕ್ಕಿಂತ ಮುಂಚೆ ಇಡೀ ನಗರವನ್ನು ಸ್ವಚ್ಛವಾಗಿ ಮಾಡುವವರು ಯಾರಾದರೂ ಇದ್ದರೆ ಅದು ಪೌರಕಾರ್ಮಿಕರು ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ಹೇಳಿದರು

ಅವರು ನಗರದ ಖಾಸಗಿ ಹೋಟೆಲ್ಸ್ ಸಭಾಂಗಣದಲ್ಲಿ ಪೌರಕಾರ್ಮಿಕರ ದಿನಾಚರಣೆಯ ಪ್ರಯುಕ್ತ ಕಾರ್ಮಿಕರಿಗೆ ಏರ್ಪಡಿಸಿದ ವಿವಿಧ ಕಿಡಕೂಟದ ವಿಜೇತ ಕ್ರೀಡಾಪಟುಗಳಿಗೆ ಬಹುಮಾನ ವಿತರಣೆ ಮಾಡಿ ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡಿದರು,

ಮುಂದುವರೆದು ಮಾತನಾಡಿದ ಅವರು ಪೌರಕಾರ್ಮಿಕರು ದುಶ್ಚಟಗಳಿಗೆ ದಾಸರಾಗಬೇಡಿ ಅದರಿಂದ ದೂರ ಇರಿ ನಿಮ್ಮ ಮನೆಗಳಲ್ಲಿ ನಿಮ್ಮ ಕುಟುಂಬ ಮಕ್ಕಳು ನಿಮ್ಮ ಮೇಲೆ ಅವಲಂಬಿತರಾಗಿರುತ್ತಾರೆ ಅವರ ಭವಿಷ್ಯದ ಸಲುವಾಗಿ ತಾವುಗಳು ಶ್ರಮಿಸಬೇಕಾಗಿದೆ ಶ್ರಮಿಸಬೇಕಾಗಿದೆ ಎಂದರು.

ಮುಂದುವರಿದು ಮಾತನಾಡಿ ಇತ್ತೀಚಿಗಷ್ಟೇ ಕಲ್ಯಾಣ ಕರ್ನಾಟಕ ಭಾಗದ ಕೆಲ ಹೊರಬೂತಿಗೆ ಪೌರಕಾರ್ಮಿಕರನ್ನು ಸರ್ಕಾರ ಕಾಯ ಮಾತಿಗೊಳಿಸಿದೆ ಅದರಂತೆ ಇನ್ನುಳಿದ ಪೌರಕಾರ್ಮಿಕರ ಕಾಯ ಮಾತಿಗೆ ಪ್ರಾಮಾಣಿಕ ಪ್ರಯತ್ನ ಮಾಡಿ ಸರ್ಕಾರಿ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ಭರವಸೆ ನೀಡಿದರು,

ಸಮಾರಂಭದಲ್ಲಿ ಉಪಾಧ್ಯಕ್ಷರಾದ ಅಶ್ವಿನಿ ಗದುಗಿನಮಠ್ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್, ಪೌರಾಯುಕ್ತರಾದ ಗಣಪತಿ ಪಾಟೀಲ್ ,ಸ್ಥಾಯಿ ಸಮಿತಿ ಅಧ್ಯಕ್ಷರಾದ ಅಕ್ಬರ್ ಪಾಷಾ ಪಲ್ಟನ್, ನಗರಸಭೆಯ ಸದಸ್ಯರಾದ ಬಸಯ್ಯ ಹಿರೇಮಠ, ಯಲ್ಲಮ್ಮ ರಮೇಶ್ ಗಿಣಿಗೇರಿ ,ಅಜೀಮ್ ಅತ್ತಾರ್ ,ಸರ್ವೇಶ್ ಗೌಡ, ಮಲ್ಲಪ್ಪ ಕವಲೂರು,ಸೇರಿದಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಾದ ಮಧು ,ಕಿರಿಯ ಅಭಿನಂದರಾದ ಸೋಮು, ಮತಿತರರು ಪಾಲ್ಗೊಂಡಿದ್ದರು ,ಇದೇ ವೇಳೆ ಕ್ರೀಡೆಯಲ್ಲಿ ವಿಜೇತರಾದ ಪೌರಕಾರ್ಮಿಕರಿಗೆ ಬಹುಮಾನ ವಿತರಣೆ ಮಾಡಲಾಯಿತು.

# ದುಡಿಮೆಯಲ್ಲಿ ಅಪಾರ ಸಂಪತ್ತಿದೆ: ಶಾಸ್ತ್ರೀ

**ತಾಳಿಕೋಟೆ :** ರಾಜ ವೈಭವದಲ್ಲಿದ್ದ ಮೊಳಿಗೆಯ ಮಾರಯ್ಯನವರು ಬಸವಣ್ಣನವರಕಡೆಭಕ್ತರುದವಡಾಯಿಸುತ್ತಿರುವುದನ್ನು ಕಂಡು ತನ್ನ ರಾಜಸ್ಥಾನವನ್ನು ತೊರೆದು ಕಲ್ಯಣದಲ್ಲಿದ್ದ ಬಸವಣ್ಣನವರ ಆ ಸ್ಥಾನಕ್ಕೆ ಆಗಮಿಸಿದ್ದರೂ ಕಟ್ಟಿಗೆ ಮಾರುವ ಕಾಯಕದಲ್ಲಿ ತೊಡಗಿಕೊಂಡ ಮಾರಯ್ಯ ದೇವರ ಒಲುಮೆಯನ್ನು ಪಡೆದದ್ದನ್ನು ಅರಿತ ಬಸವಣ್ಣನವರು ಅವರನ್ನು ಬಹಳೇ ಗೌರವಿಸುತ್ತಿದ್ದರೆಂದು ಪುರಾಣ ಪ್ರವಚನಕಾರರಾದ ಪ್ರವಚನ ರತ್ನ ಕಲ್ಬುರ್ಗಿ ಜಿಲ್ಲೆಯ ಸುಂಟನೂರ ಸಂಸ್ಥಾನ ಹಿರೇಮಠದ ಶ್ರೀ ಬಂಡಯ್ಯ ಶಾಸ್ತ್ರೀಗಳು ನುಡಿದರು.

ಶ್ರೀ ಖಾಸ್ಗತೇಶ್ವರರ 128ನೇ ಹಾಗೂ ಶ್ರೀ ವೀರಕ್ತ ಮಹಾಸ್ವಾಮಿಗಳವರ 10ನೇ ಪುಣ್ಯಸ್ಮರಣೋತ್ಸವ ಕುರಿತು ಏರ್ಪಡಿಸಲಾದಆಧ್ಯಾತ್ಮೀಕಪ್ರವಚನದ4ನೇ ದಿನದಂದು ಮಾತನಾಡುತ್ತಿದ್ದ ಶಾಸ್ತ್ರೀಗಳು ಮಾರಯ್ಯನವರುಲಿಂಗವನ್ನೇಮಾತನಾಡಿಸಿ ತಮ್ಮ ಪ್ರಾಮಾಣಿಕತನದ ದುಡಿಮೆಯತ್ತಸಾಗಿದುಡಿಮೆಯಲ್ಲಿಯೇಅಪಾರಸಂಪತ್ತಿದೆ ಎಂದು ತೋರಿಸಿ ಕೊಟ್ಟಿದ್ದಾರೆಂದರು. ಸಣ್ಣ ದುಡಿಮೆಯಾಗಲೀ ಅಥವಾ ದೊಡ್ಡ ದುಡಿಮೆ ಯಾಗಲೀ ಯಾವುದಾದರೇನು ಅದು ಕಾಯಕವೇ ಕಾರಣ ಬಸವಣ್ಣನವರು ಕಾಯಕವೇ ಕೈಲಾಸವೆಂದಿದ್ದಾರೆ ಇದನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡ ಮೊಳಿಗೆಯ ಮಾರಯ್ಯನವರು ಸದಾ ಕಾಯಕದಲ್ಲಿ ತೊಡಗುತ್ತಿದ್ದರೆಂದರು.

ಶರಣರು ಪ್ರಾಬಲ್ಯತೆಯನ್ನು ಕೊಟ್ಟಿದ್ದು ಕಾಯಕಕ್ಕೆ ಮಾತ್ರ ಅವರಂತೆ ತೋಟದ ಸಿದ್ದಲಿಂಗ ಶ್ರೀಗಳು ಹಾಗೂ ಖಾಸ್ಗತರು, ವೀರಕ್ತ ಶ್ರೀಗಳು ಕಾಯಕಕ್ಕೆ ಮಹತ್ವ ಕೊಟ್ಟಿದ್ದಾರೆಂದರು. ಕಾಯಕ ಜೀವಿ ಆಗದಿದ್ದವರಿಗೆ 12ನೇ ಶತಮಾನದಲಲ್ಲಿ ಕಲ್ಯಾಣ ಮಂಟಪದಲ್ಲಿ ಪ್ರವೇಶವಿದ್ದಿಲ್ಲ ಇಂತಹ ಪರಂಪರೆಯನ್ನು ಶರಣರು ಮುಂದುವರೆಸಿಕೊಂಡು ಬಂದಿದ್ದಾರೆಂದರು. ಸಮಾಜ ತೀದ್ದುವುದು ಸ್ವಾಮಿತ್ವದ ಕಾಯಕವೆಂಬುವುದನ್ನು ಶ್ರೀ ಖಾಸ್ಗತರು ಶ್ರೀ ವೀರಕ್ತ ಮಹಾಸ್ವಾಮಿಗಳು ಮಾಡಿತೋರಿಸಿ ದ್ದಾರೆ ಬಸವಣ್ಣನವರ ವ್ಯಕ್ತಿತ್ವ ಅವರ ಕಾಯಕ ನೀಷ್ಠೆಯನ್ನು ಅರಿತ ಭಕ್ತರು 12ನೇ ಶತಮಾನದಲ್ಲಿ ಕಾಶ್ಮೀರದಿಂದ ಕಲ್ಯಾಣದವರೆಗೆ ಅಂದಿನ ಕಾಲದಲ್ಲಿ ಲಕ್ಷಗಟ್ಟಲೇ ಆಗಮಿಸುತ್ತಿದ್ದ ಭಕ್ತಸಮೂಹದಲ್ಲಿ 6000ಜನ ಕಾಶ್ಮೀರದಿಂದಕಲ್ಯಾಣಕ್ಕೆಬಂದಿದ್ದರೆಂಬುದು ಇತಿಹಾಸದಲ್ಲಿದೆ ಎಂದರು.

ಆಚಾರ ಅನಾಚಾರಗಳಲ್ಲಿಯೇ ಸ್ವರ್ಗ ನರಕಗಳನ್ನು ಕಾಣುವುದಿದೆ ಎಂದು ಶಿವಯೋಗಿಗಳು ಹಾಗೂ ಶರಣರು, ಸಂತರು ದಾರ್ಶನಿಕರು ಹೇಳಿದ್ದಾರೆಂದರು. ವಿಜಯಪುರದಲ್ಲಿ ಇತ್ತೀಚಿಗೆ ಸಿದ್ದೇಶ್ವರ ಶ್ರೀಗಳು ನಮ್ಮನ್ನು ಬಿಟ್ಟು ಅಗುಲಿದಾಗ ಸರ್ವ ಜನಾಂಗವೇ ಕಣ್ಣೀರಿಟ್ಟು ದುಃಖಿಸುತ್ತಿತ್ತು ಇಂತಹ ಶ್ರೀಗಳು ಇನ್ನು ಬದುಕಬೇಕಾಗಿತ್ತು ಎಂಬ ಮಾತುಗಳೇ ಕೇಳಿಬರುತ್ತಿದ್ದಂತಹ ಮಾತುಗಳನ್ನು ಆಡಿಸಿಕೊಳ್ಳುವವ ಸ್ವರ್ಗಕ್ಕೆ ಹೊಗುತ್ತಾನೆ ಎಂಬುದಾಗಿದೆ ಎಂದು ಹೇಳಿದ ಶಾಸ್ತ್ರೀಗಳು ಹಿಂದಿನ ಹಾಗೂ ಇಂದಿನಕಾಲದ ಸ್ಥೀತಿಗತಿಗಳನ್ನು ವಿವರಿಸಿದ ಶಾಸ್ತ್ರೀಗಳು ಜಾನಪದಗಳಲ್ಲಿಯೂ ಮಹತ್ವವಿತ್ತು ಜಾನಪದ ಸಾಹಿತ್ಯ ಎಂಬುದು ಉಗಮವಾಗಿದ್ದುದು ಜಾಣ ಜಾಣೆಯರು ಹಾಡಿ ಕುಳಿತಲ್ಲಿ ನಿಂತಲ್ಲಿ ಬರೆದವುಗಳೆಲ್ಲವು ವಚನಗಳಾಗಿವೆ ಎಂದರು.

# ಇಲಕಲ್ ನಾಗರಿಕರ ನೀರಿನ ಸಮಸ್ಯ ನಿವಾರಿಸಲು ಹಾಗೂ ನಗರಾಭಿವೃದ್ಧಿಯತ್ತ ಗಮನಹರಿಸಲು ವೆಲ್ಫೇರ್ ಪಾರ್ಟಿ ಆಗ್ರಹ



**ಇಲಕಲ್ :** ವೇಲ್ಫೇರ್ ಪಾರ್ಟಿ ಆಫ್ ಇಂಡಿಯಾ, ಇಲಕಲ್ ಘಟಕದ ವತಿಯಿಂದ ನಗರಾಭಿವೃದ್ಧಿ ಹಾಗೂ ಸಾರ್ವಜನಿಕ ಮೂಲಭೂತ ಸೌಕರ್ಯಗಳ ಕುರಿತು ಇಂದು ದಿನಾಂಕ 23/09/2024 ರಂದು ಇಲಕಲ್ ನಗರಸಭೆಯಲ್ಲಿಸನ್ಮಾನ್ಯಕಮೀಷನರ್‌ಅವರಿಗೆ ಬೇಡಿಕೆ ಸಲ್ಲಿಸಲಾಯಿತು. ಇಲ್ಲಿನ ನಾಗರಿಕರು ನೀರಿನ ಸಮಸ್ಯೆ, ಹದಗೆಟ್ಟ ರಸ್ತೆಗಳು ಹಾಗೂ ಸ್ವಚ್ಛತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಲಾಯಿತು.

ಈ ವೇಳೆ ರಾಜ್ಯ ಕಾರ್ಯದರ್ಶಿ ರಿಜ್ವಾನ್ ಹುಮನಾಬಾದ್, ಜಿಲ್ಲಾ ಉಪಾಧ್ಯಕ್ಷ ಅಫ್ಜಲ್ ಹುಸೇನ್, ನಗರಾಧ್ಯಕ್ಷ ಸಿರಾಜ್ ಹುಣಚಗಿ, ನಗರ ಕಾರ್ಯದರ್ಶಿ ರಫೀಕ್ ಬಳಗಾನೂರ ಮತ್ತು ಮತ್ತಿತರರು ಉಪಸ್ಥಿತರಿದ್ದರು.

ಹೆಚ್ಚುವರಿ ಬೇಡಿಕೆಗಳಲ್ಲಿ, ಕುಡಿಯುವ ನೀರಿನ ಸರಬರಾಜು, ರಸ್ತೆಗಳ ದುರಸ್ತಿ, ಮತ್ತು ಬೀದಿ ದೀಪಗಳ ಸುಧಾರಣೆ ಸೇರಿದಂತೆ ಶೌಚಾಲಯ ಮತ್ತು ಪಾದಚಾರಿ ಮಾರ್ಗಗಳ ಅಗತ್ಯವನ್ನು ಕೂಡ ಉಲ್ಲೇಖಿಸಲಾಯಿತು.

ಅನ್ವರ್ ಥಾಲಾಯತ್, ಶಹಬಾಜ್ ಅಹ್ಮದ್, ಇರ್ಷಾದ್ ಮುಲ್ಲಾ, ಶೋಯೆಬ್, ಪರ್ವೇಜ್, ಶಂಸುದ್ದಿನ್ ಹಾಗೂ ಹಲವರು ಈ ಸಮಯದಲ್ಲಿ ಭಾಗವಹಿಸಿ, ಸಾರ್ವಜನಿಕ ಸಮಸ್ಯೆಗಳ ಪರಿಹಾರದ ಕುರಿತಾಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State